ಸೌಹಾರ್ದ ಸಹಕಾರಿ ಚಳವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

# ಸ್ವಾಭಿಮಾನಿ ಸಹಕಾರಿ

Swabhimani Sahakari

ಸ್ವಾಯತ್ತತೆ
ಸ್ವಯಂ ಆಡಳಿತ
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

Volume - 12
Issue - 10
Pages - 20
₹ - 12
November- 2014



ಜೋಗದ ಸಿರಿ ಬೆಳಕಿನಲ್ಲಿ ತುಂಗೆಯ ತೆನೆ ಬಳುಕಿನಲ್ಲಿ
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯ ಹರಿದ್ವರ್ಣ ವನದ ತೇಗ ಗಂಧ ತರುಗಳಲ್ಲಿ
ನಿತ್ಯೋತ್ಸವ, ತಾಯಿ, ನಿತ್ಯೋತ್ಸವ ನಿನಗೆ...

– ಕೆ.ಎಸ್. ನಿಸಾರ್ ಅಹಮದ್



ಸಂಯುಕ್ತ ಸಹಕಾರಿ ನೇತೃತ್ವದಲ್ಲಿ

## ಸಹಕಾರ ಸಂಸ್ಥೆಗಳಲ್ಲಿ ಸದಸ್ಯ ಸೇವೆಗಳನ್ನು ಬಲಪಡಿಸುವಿಕೆ ಮತ್ತು ಭಾಗವಹಿಸುವಿಕೆ ದಿನ

## 61ನೇ ಅಖಿಲ ಭಾರತ ಸಹಕಾರ ಸಪ್ತಾಹ ಸಮಾರೋಪ ಸಮಾರಂಭ

ದಿನಾಂಕ : 20-11-2014, ಸ್ಥಳ : ಬೆಳಗಾವಿ

ಸೌಹಾರ್ದ ಸಹಕಾರಿಗಳ ಸಂಖ್ಯೆ : 3015 । 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ : 680

# 61ನೇ ಸಹಕಾರ ಸಪ್ತಾಹದ ಅರ್ಥಪೂರ್ಣ ಆಚರಣೆ ಅಗತ್ಯ



ಸಮಸ್ತ ಸಹಕಾರಿ ಬಂಧುಗಳಿಗೆ ಕನ್ನಡ ರಾಜ್ಯೋತ್ಸವ ಹಾಗೂ 61ನೇ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು.

ಪ್ರತಿವರ್ಷ ನವೆಂಬರ್ 14 ರಿಂದ 20ರ ವರೆಗೆ ರಾಷ್ಟ್ರದಾದ್ಯಂತ ಸಹಕಾರ ಸಪ್ತಾಹವನ್ನು ಆಚರಿಸುತ್ತಿರುವುದು ಸಹಕಾರಿಗಳಿಗೆಲ್ಲ ತಿಳಿದಿರುವ ವಿಷಯ. ಸಹಕಾರ ಸಪ್ತಾಹವನ್ನು ಕಳೆದ 60 ವರ್ಷಗಳಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯ ಅಂಕಿ ಸಂಖ್ಯೆಗಳ ಪ್ರಕಾರ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗಿರುವ ಈ ಆಚರಣೆಯಿಂದಾಗಿ ವಿಶ್ವದ 100 ದೇಶಗಳಲ್ಲಿ 1.4 ಮಿಲಿಯನ್ ಸಹಕಾರ ಸಂಸ್ಥೆಗಳಿವೆ. 100 ಮಿಲಿಯನ್ ಜನರಿಗೆ ಉದ್ಯೋಗ ಒದಗಿಸಿದೆ. ಅಪ್ರತ್ಯಕ್ಷವಾಗಿ ಒಂದು ಬಿಲಿಯನ್ ಜನರಿಗೆ ಈ ಕ್ಷೇತ್ರದ ಪ್ರಯೋಜನವಾಗುತ್ತಿದೆ. ನಮ್ಮ ದೇಶದ ಸಹಕಾರ ಕ್ಷೇತ್ರ ವಿಶ್ವದಲ್ಲಿಯೇ ದೊಡ್ಡ ಕ್ಷೇತ್ರವಾಗಿದೆ. ಇದುವರೆಗೆ ನಮ್ಮ ದೇಶದಲ್ಲಿ 6 ಲಕ್ಷ ಸಹಕಾರ ಸಂಸ್ಥೆಗಳು, 26 ಕೋಟಿ ಸದಸ್ಯರ ಬಳಗವಿದೆ. 100 ಪ್ರತಿಶತ ಹಳ್ಳಿಗಳು ಈ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿವೆ. ದೇಶದಲ್ಲಿ ಹಸಿರು ಕ್ರಾಂತಿ ಹಾಗೂ ಶ್ವೇತ ಕ್ರಾಂತಿಗಳಿಂದಾಗಿ ರೈತರ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನಾಂದಿ ಹಾಡಿದೆ. ಮತ್ತೊಂದು ಹಸಿರು ಕ್ರಾಂತಿಗೆ ಈ ದೇಶ ಸಜ್ಜಾಗಿದೆ.

ಕರ್ನಾಟಕದಲ್ಲಿ 37,468 ಸಹಕಾರ ಸಂಸ್ಥೆಗಳಿದ್ದು, ಸುಮಾರು 2,18,11,000 ಸದಸ್ಯರಿದ್ದಾರೆ. 28,901 ಕೋಟಿಗಳ ಠೇವಣಿಯಿದೆ. 58,692 ಕೋಟಿಯಷ್ಟು ದುಡಿಯುವ ಬಂಡವಾಳವಿದೆ. ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಸಹಕಾರ ಈ ದೇಶದ ಜನರ ಜೀವನ ಪದ್ಧತಿಯಾಗಿ ಹೊರಹೊಮ್ಮಿದೆ.

ಈ ಕ್ಷೇತ್ರ ಇನ್ನೂ ಸದೃಢವಾಗಿ ಕಾರ್ಯನಿರ್ವಹಿಸುವುದು ಅಗತ್ಯ. ಈ ಕ್ಷೇತ್ರದ ವ್ಯಾಪ್ತಿಗೆ ಹೆಚ್ಚು ಜನರು ಬರುವಂತಾಗಬೇಕು. ವಿಶೇಷವಾಗಿ ಯುವಕರು, ಮಹಿಳೆಯರು, ಹಿಂದುಳಿದ ವರ್ಗದವರು, ಪರಿಶಿಷ್ಟಜಾತಿ ಹಾಗೂ ಪರಿಶಿಷ್ಟವರ್ಗದ ಜನರಿಗೆ ಹೆಚ್ಚಿಗೆ ಪ್ರಯೋಜನವಾಗುವಂತೆ ವ್ಯಾಪಕ ಪ್ರಚಾರವಾಗಬೇಕಿದೆ. 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಧ್ಯೇಯ “ಬೆಳವಣಿಗೆಯನ್ನೊಳಗೊಂಡ ಸುಸ್ಥಿರತೆಗೆ ಸಹಕಾರಿ ಮಾದರಿ” ಯನ್ನಾಗಿ ಪರಿಗಣಿಸುವುದಕ್ಕೆ ಸಹಕಾರಿಗಳೆಲ್ಲ ಕಾರ್ಯನಿರ್ವಹಿಸುವುದು ಅಗತ್ಯ. ಸಭೆ ಸಮಾರಂಭಗಳನ್ನು ಹಮ್ಮಿಕೊಳ್ಳಿ. ಸಮಾಜಮುಖಿ ಎನಿಸುವ ಸದಸ್ಯರಲ್ಲಿ ಸಹಕಾರಿಯ ಧ್ಯೇಯ ಧೋರಣೆಗಳ ಬಗ್ಗೆ, ಸಾಧನೆಗಳ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ, ಕರ್ತವ್ಯ ಹಾಗೂ ಜವಾಬ್ದಾರಿಗಳ ಬಗ್ಗೆ ಜಾಗೃತಿ ಮೂಡಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಿ. ವೃತ್ತಿಪರತೆಗೆ ಹಾಗೂ ಪಾರದರ್ಶಕತೆಗೆ ಹೆಚ್ಚಿನ ಆದ್ಯತೆ ನೀಡಿ.

ಆರ್ಥಿಕ ಅಭಿವೃದ್ಧಿಗೆ ಸಹಕಾರವೇ ಹೆಬ್ಬಾಗಿಲು ಎಂದು ಮಹಾತ್ಮಾ ಗಾಂಧೀಜಿಯವರು ಹೇಳಿರುವ ಮಾತಿನಂತೆ ಸಹಕಾರ ಕ್ಷೇತ್ರವನ್ನು ಬಲಪಡಿಸುವ ಕಾರ್ಯ ನಮ್ಮೆಲ್ಲರಿಂದ ಆಗಬೇಕಿದೆ. ಈ ನಿಟ್ಟಿನಲ್ಲಿ ನಾವೆಲ್ಲ ಸಹಕಾರಿ ಸಪ್ತಾಹವನ್ನು ಯಶಸ್ವಿಯಾಗಿಸಲು ತನ್ಮೂಲಕ ಸಹಕಾರಿ ಕ್ಷೇತ್ರವನ್ನು ಬಲಪಡಿಸಲು ಶ್ರಮಿಸೋಣ.

▸▸ **ಗುರುನಾಥ ಜಾಂತಿಕರ,** ಅಧ್ಯಕ್ಷರು

ಕರ್ನಾಟಕದಲ್ಲಿ 37,468 ಸಹಕಾರ ಸಂಸ್ಥೆಗಳಿದ್ದು, ಸುಮಾರು 2,18,11,000 ಸದಸ್ಯರಿದ್ದಾರೆ. 28,901 ಕೋಟಿಗಳ ಠೇವಣಿಯಿದೆ. 58,692 ಕೋಟಿಯಷ್ಟು ದುಡಿಯುವ ಬಂಡವಾಳವಿದೆ. ಉತ್ತಮ ಆರ್ಥಿಕ ಸಂಘಟನೆಗಳಾಗಿ ಕಾರ್ಯನಿರ್ವಹಿಸುತ್ತಿವೆ. ಸಹಕಾರ ಈ ದೇಶದ ಜನರ ಜೀವನ ಪದ್ಧತಿಯಾಗಿ ಹೊರಹೊಮ್ಮಿದೆ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಗುರುನಾಥ ಜಾಂತಿಕರ
ಗೌರವ ಅಧ್ಯಕ್ಷರು

ಶ್ರೀ ಹೆಚ್.ವಿ.ರಾಜೀವ
ಗೌರವ ಉಪಾಧ್ಯಕ್ಷರು

ಶ್ರೀ ಎಸ್.ಆರ್.ಸತೀಶಚಂದ್ರ
ಗೌರವ ಸದಸ್ಯರು

ಶ್ರೀ ಶರಣಗೌಡ ಜಿ. ಪಾಟೀಲ್
ಸಂಪಾದಕರು

ಶ್ರೀ ವಿ.ಜೆ.ಕಾರಕೂನ
ಸಂಚಾಲಕರು

ಶ್ರೀ ರಘುನಂದನ ಕೆ.
ಸದಸ್ಯರು

## ಒಳ ಪುಟಗಳಲ್ಲಿ . . .

ಸಹಕಾರ ಸಂಸ್ಥೆಗಳ ಹಿತ ರಕ್ಷಣೆಗೆ ಕೇಂದ್ರ ಸರಕಾರ ಬದ್ಧ – ಕೇಂದ್ರ ಸಚಿವ ಶ್ರೀ ನಿತಿನ ಗಡ್ಕರಿ ...................... 4

ದಿನಾಂಕ : 20–11–2014ರಂದು ಬೆಳಗಾವಿಯ ಗಾಂಧೀ ಭವನದಲ್ಲಿ 61ನೇ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭಕ್ಕೆ ಸಿದ್ಧತೆ ........................................... 5

ದಿನಾಂಕ : 20–11–2014 ರಂದು ಬೆಳಗಾವಿಯ ಗಾಂಧೀಭವನದಲ್ಲಿ 61ನೇ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭಕ್ಕೆ ಸಿದ್ಧತೆ ....................... 6

ಸೌಹಾರ್ದ ಸಹಕಾರ ಕ್ಷೇತ್ರದ ಪಾಲ್ಗೊಳ್ಳುವಿಕೆ ಶ್ಲಾಘನೀಯ– ಶ್ರೀ ಹೆಚ್.ಎಸ್. ನಾಗರಾಜಯ್ಯ ............................ 8

ಕೂಡಲ ಸಂಗಮದಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನದ 12ನೇ ತಂಡದ ತರಬೇತಿ ಕಾರ್ಯಕ್ರಮ ................. 9

ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ವಾರ್ಷಿಕ ಸಾಮಾನ್ಯ ಸಭೆ ಹಾಗೂ ವಿವಿಧ ಕಾರ್ಯಕ್ರಮಗಳು ...... 10

ವೆಬ್‌ಸೈಟ್ ಪರಿಚಯ ಮಾಲಿಕೆ ............................ 14

59ನೇ ಕನ್ನಡ ರಾಜ್ಯೋತ್ಸವ ರಾಜ್ಯ ಪ್ರಶಸ್ತಿ ಪುರಸ್ಕೃತ ಸಹಕಾರಿಗಳು .................................................. 16

ಅಧ್ಯಯನ ಪ್ರವಾಸದ ಅನಿಸಿಕೆಗಳು ಭಾಗ – 2 : ಪ್ರಯಾಸವಾಗದ ಪ್ರವಾಸ ...................................... 17

ಲೇಖನ ............................................................ 19

# ಸಂಪಾದಕೀಯ

## 20-11-2014 ರಂದು 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಮುಕ್ತಾಯದ ದಿನದ ಆಚರಣೆಗೆ ಸಂಯುಕ್ತ ಸಹಕಾರಿಗೆ ನೇತೃತ್ವ :

### ಕಾರ್ಯಕ್ರಮದ ಯಶಸ್ಸಿಗೆ ಬೆಳಗಾವಿ ಜಿಲ್ಲೆಯ ಸಹಕಾರಿ ಸಂಸ್ಥೆಗಳಿಗೆ ಹಾಗೂ ಸಹಕಾರಿಗಳಿಗೆ ಹೆಚ್ಚಿನ ಜವಾಬ್ದಾರಿ

ದಿನಾಂಕ : 21–10–2014 ರಂದು ನಡೆದ ಮಾನ್ಯ ಸಹಕಾರ ಸಚಿವರ ಅಧ್ಯಕ್ಷತೆಯಲ್ಲಿ 61ನೇ ಸಹಕಾರ ಸಪ್ತಾಹದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ದಿನಾಂಕ : 20–11–2014 ರಂದು 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಮುಕ್ತಾಯದ ದಿನದ ಆಚರಣೆಗೆ ಸಂಯುಕ್ತ ಸಹಕಾರಿಗೆ ನೇತೃತ್ವ ವಹಿಸಿಕೊಡಲಾಗಿದೆ. ಕರ್ನಾಟಕ ರಾಜ್ಯ ತೋಟಗಾರಿಕಾ ಮಹಾಮಂಡಳ, ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಜಿಲ್ಲಾ ಸಹಕಾರ ಯೂನಿಯನ್, ಹಾಲು ಉತ್ಪಾದಕರ ಒಕ್ಕೂಟ, ಸಹಕಾರಿ ಸಕ್ಕರೆ ಕಾರ್ಖಾನೆಗಳು, ಪಟ್ಟಣ ಸಹಕಾರ ಬ್ಯಾಂಕುಗಳು, ಕ್ರೆಡಿಟ್ ಸಹಕಾರ ಸಂಸ್ಥೆಗಳು, ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು, ಹಾಲು ಉತ್ಪಾದಕರ ಸಹಕಾರ ಸಂಸ್ಥೆಗಳು, ಮಹಿಳಾ ಸಹಕಾರ ಸಂಸ್ಥೆಗಳು, ಪೀಕಾರ್ಡ ಬ್ಯಾಂಕುಗಳು, ತಾಲ್ಲೂಕು ಮಾರಾಟ ಸಹಕಾರ ಸಂಘಗಳು, ಗ್ರಾಹಕ ಸಹಕಾರ ಸಂಘಗಳು, ಕೈಗಾರಿಕಾ ಸಹಕಾರ ಸಂಘಗಳು ಹಾಗೂ ಇತರೆ ಎಲ್ಲಾ ಸಹಕಾರ ಸಂಸ್ಥೆಗಳು, ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳು ಹಾಗೂ ಸಹಕಾರ ಇಲಾಖೆ ಸೇರಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಅವಕಾಶ ಒದಗಿದೆ. ಈ ನಿಟ್ಟಿನಲ್ಲಿ ನಾವು ನೀವುಗಳೆಲ್ಲ ಸೇರಿ ಕಾರ್ಯ ನಿರ್ವಹಿಸುವುದು ಅಗತ್ಯ.

ಈ ದಿನವನ್ನು ಸಹಕಾರ ಸಂಸ್ಥೆಗಳಲ್ಲಿ ಸದಸ್ಯ ಸೇವೆಗಳನ್ನು ಬಲಪಡಿಸುವುದು ಮತ್ತು ಭಾಗವಹಿಸುವಿಕೆಯನ್ನಾಗಿ ಆಚರಿಸಲು ರಾಷ್ಟ್ರೀಯ ಸಹಕಾರ ಯೂನಿಯನ್ ನವರು ಮಾರ್ಗದರ್ಶನ ಮಾಡಿದ್ದಾರೆ. ಇದು ಇಂದಿನ ಅವಶ್ಯಕತೆ ಕೂಡ ಆಗಿದೆ.

110 ವರ್ಷಗಳ ಇತಿಹಾಸವಿರುವ ಸಹಕಾರ ಕ್ಷೇತ್ರ ಈ ದೇಶದಲ್ಲಿ ಸಾಕಷ್ಟು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತ ಬಂದಿದೆ. ದೇಶದ ಅರ್ಥ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಈ ದೇಶದ ಜನರ ಜೀವನ ಪದ್ಧತಿಯಾಗಿ ಬೆಳೆದಿದೆ. ಸರಕಾರ ಯಾವುದೇ ಯೋಜನೆ ಇದ್ದರೂ ಅವುಗಳನ್ನು ಕಾರ್ಯಗತಗೊಳಿಸಲು ಸಹಕಾರ ಕ್ಷೇತ್ರಕ್ಕೆ ಸಮನಾದ ವ್ಯವಸ್ಥೆ ಬೇರೊಂದಿಲ್ಲ.

ಆದರೆ, ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣಗಳ ಹಿನ್ನೆಲೆಯಲ್ಲಿ ಬದಲಾಗುತ್ತಿರುವ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ವ್ಯವಸ್ಥೆ ಹಿಂದೆಂದಿಗಿಂತಲೂ ಉತ್ತಮವಾಗಿ, ಸದೃಢವಾಗಿ, ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯ ಸಾಧನವಾಗಿ ಕಾರ್ಯನಿರ್ವಹಿಸಬೇಕಿದೆ. ಆದ್ದರಿಂದ ಸದಸ್ಯರ ಭಾಗವಹಿಸುವಿಕೆ ಪ್ರಮಾಣ ಹೆಚ್ಚಬೇಕು. ಸದಸ್ಯರ ಭಾಗವಹಿಸುವಿಕೆಯ ಪ್ರಮಾಣ ಹೆಚ್ಚಬೇಕಾದರೆ ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯರಿಗೆ ನೀಡುವ ಸೇವಾ ಸೌಲಭ್ಯಗಳ ಪ್ರಮಾಣ ಹೆಚ್ಚಾಗಬೇಕು ಚಿಕ್ಕ ಚಿಕ್ಕ ಸೇವೆಗಳಿಂದ ಅಲ್ಪ ಪ್ರಮಾಣದ ಸೇವಾ ಶುಲ್ಕ ಪಡೆಯುವುದರಿಂದ ಸಹಕಾರ ಸಂಸ್ಥೆಗಳು ಆರ್ಥಿಕವಾಗಿ ಸದೃಢವಾಗುತ್ತವೆ. ಅದೇ ರೀತಿ ಸೇವೆ ಉತ್ತಮ ಗುಣಮಟ್ಟದ್ದಾಗಿರಬೇಕು. ಈ ನಿಟ್ಟಿನಲ್ಲಿ ಚಿಂತನ ಮಂಥನಗಳು ನಡೆಯಬೇಕು. ಉತ್ತಮ ಕಾರ್ಯಯೋಜನೆಗಳು ಸಿದ್ಧಗೊಳ್ಳಬೇಕು. ಯೋಜನೆಗಳ ಅನುಷ್ಠಾನಕ್ಕೆ ಭೂಮಿಕೆ ಸಿದ್ಧಪಡಿಸಬೇಕು. ಈ ರಾಜ್ಯಕ್ಕೆ ಈ ದೇಶಕ್ಕೆ ಉತ್ತಮ ಸಂದೇಶ ನೀಡಬೇಕು.

ಸಹಕಾರದ ಶಕ್ತಿ, ಸಾಮರ್ಥ್ಯ ಹಾಗೂ ಸಾಧನೆಗಳನ್ನು ಸಾರ್ವಜನಿಕರಿಗೆ ತಿಳುವಳಿಕೆ ಮಾಡಿಕೊಡುವ ಈ ಅವಕಾಶದ ಸದುಪಯೋಗವಾಗಬೇಕು. ■

# ಸಹಕಾರ ಸಂಸ್ಥೆಗಳ ಹಿತ ರಕ್ಷಣೆಗೆ ಕೇಂದ್ರ ಸರಕಾರ ಬದ್ಧ – ಕೇಂದ್ರ ಸಚಿವ ಶ್ರೀ ನಿತಿನ ಗಡ್ಕರಿ



ಕ್ರೆಡಿಟ್ ಸಹಕಾರ ಸಂಘಗಳು ಎದುರಿಸುತ್ತಿರುವ ಜ್ವಲಂತ ಸಮಸ್ಯೆಯಾಗಿರುವ ಆದಾಯ ತೆರಿಗೆ ಸೇರಿದಂತೆ ಹಲವಾರು ವಿಷಯಗಳ ಬಗ್ಗೆ ಚರ್ಚಿಸುವ ಹಾಗು ತರಬೇತಿಯನ್ನು ನೀಡುವ ಕ್ರೆಡಿಟ್ ಸಹಕಾರ ಸಂಸ್ಥೆಗಳ ಸಮಾವೇಶ ಹಾಗೂ ತರಬೇತಿ ಕಾರ್ಯಕ್ರಮವನ್ನು ರಾಷ್ಟ್ರೀಯ ಸಹಕಾರ ಭಾರತಿ ನೇತೃತ್ವದಲ್ಲಿ ದಿನಾಂಕ 1,2 ನವೆಂಬರ 2014ರಂದು ಗೋವಾದಲ್ಲಿ ಎರ್ಪಡಿಸಲಾಗಿತ್ತು. ಸಹಕಾರ ಸಂಸ್ಥೆಗಳ ಹಿತ ರಕ್ಷಣೆಗೆ ಕೇಂದ್ರ ಸರಕಾರ ಬಧ್ಧ. ಸಹಕಾರ ಭಾರತಿಯ ನೇತೃತ್ವದಲ್ಲಿ ಗೋವಾದಲ್ಲಿ ನಡೆದ ಕ್ರೆಡಿಟ್ ಸಹಕಾರ ಸಂಸ್ಥೆಗಳ ಸಮಾವೇಶ ಹಾಗೂ ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಶ್ರೀ ನಿತಿನ ಗಡ್ಕರಿಯವರು ತಿಳಿಸಿದರು.

## ಸಹಕಾರ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ಅಗತ್ಯ : ಸಿ.ಬಿ.ಡಿ.ಟಿ. ತಂಡದ ಸದಸ್ಯೆ ಶ್ರೀಮತಿ ಸಿನ್ಹಾ

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕೇಂದ್ರ ಸಿ.ಬಿ.ಡಿ.ಟಿ. (ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸಸ್) ತಂಡದ ಸದಸ್ಯೆ ಶ್ರೀಮತಿ ಸಿನ್ಹಾರವರು ಮಾತನಾಡಿ ಕ್ರೆಡಿಟ್ ಸಹಕಾರ ಸಂಸ್ಥೆಗಳಿಗೆ ಆದಾಯ ತೆರಿಗೆ ಇಲಾಖೆಯಿಂದ ಆಗುತ್ತಿರುವ ಕಿರುಕುಳದ ಬಗ್ಗೆ ಗಮನಹರಿಸಲಾಗುವುದು ಎಂದು ತಿಳಿಸಿ ಸಹಕಾರ ಸಂಸ್ಥೆಗಳಲ್ಲಿ ಆರ್ಥಿಕ ಶಿಸ್ತು ಅವಶ್ಯಕ. ಪಾರದರ್ಶಕತೆಯನ್ನು ಅಳವಡಿಸಿಕೊಂಡಲ್ಲಿ ಯಾವುದೇ ಸಂಸ್ಥೆಗಳಿಗೂ, ವ್ಯಕ್ತಿಗಳಿಗೂ ಭಯದ ಅಗತ್ಯವಿಲ್ಲ. ಅದನ್ನು ಬೆಳೆಸಲು ಸಹಕಾರಿಗಳು ಗಮನ ಹರಿಸಬೇಕು ಎಂದು ತಿಳಿಸಿದರು. ದೇಶದಲ್ಲಿ ಕ್ರೆಡಿಟ್ ಸಹಕಾರ ಸಂಘಗಳ ಸಂಖ್ಯೆ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ಇಷ್ಟೊಂದು ಉತ್ತಮ ಸಂಖ್ಯೆಯಲ್ಲಿ ಹಲವು ವಿಧವಾಗಿ ಸದಸ್ಯರಿಗೆ ಸೇವೆ ಸಲ್ಲಿಸುತ್ತಿರುವ ಈ ಸಂಘಗಳು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವಂತಾಗಬೇಕು. ದೇಶದ ಆರ್ಥಿಕ ಅಭಿವೃದ್ಧಿಗೆ ತಮ್ಮ ಪಾಲಿನ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕು ಎಂದು ತಿಳಿಸಿದರು.

ಸಮಾರಂಭನ್ನು ಗೋವಾ ರಾಜ್ಯದ ಮುಖ್ಯಮಂತ್ರಿ ಶ್ರೀ ಮನೋಹರ ಪರಿಕ್ಕಾರವರು ಉದ್ಘಾಟಿಸಿದರು. ಗೋವಾರಾಜ್ಯದ ಮಾಜಿ ಸಹಕಾರ ಮಂತ್ರಿ ಶ್ರೀ ಪ್ರಕಾಶ ವೆಲಿಪ್ರವರು ಮುಖ್ಯ ಅತಿಥಿಗಳಾಗಿದ್ದರು. ಸಮಾರದ ಅಧ್ಯಕ್ಷತೆಯನ್ನು ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷ ಶ್ರೀ ಸತೀಶ ಮರಾಠೆಯವರು ವಹಿಸಿದ್ದರು.

ಕಾರ್ಯಕ್ರಮದಲ್ಲಿ ದೇಶದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ ಹಲವಾರು ಸಂಸ್ಥೆಗಳನ್ನು ಸನ್ಮಾನಿಸಲಾಯಿತು.



# ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಲು ದಿನಾಂಕ 20-11-2014 ರಾಜ್ಯಪಾಲರು ಬೆಳಗಾವಿಗೆ : ಶ್ರೀ ಲಕ್ಷ್ಮಣ ಸವದಿ



ಶ್ರೀ ಲಕ್ಷ್ಮಣ ಸವದಿಯವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯು ದಿನಾಂಕ 31-10-2014 ರಂದು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸಭಾಂಗಣದಲ್ಲಿ ನಡೆದು ಸಹಕಾರ ಸಪ್ತಾಹದ ಕಾರ್ಯಕ್ರಮಗಳ ಪೂರ್ವಭಾವಿ ಸಿದ್ಧತೆಗಳ ಬಗ್ಗೆ ಚರ್ಚಿಸಲಾಯಿತು. ಸಹಕಾರ ಸಪ್ತಾಹದ ಸಮಾರೋಪ ಕಾರ್ಯಕ್ರಮದಲ್ಲಿ ಭಾಗವಹಿಸಲು ದಿನಾಂಕ 20-11-2014 ರಾಜ್ಯಪಾಲರು ಬೆಳಗಾವಿಗೆ ಆಗಮಿಸಲಿದ್ದಾರೆ ಎಂದು ತಿಳಿಸಿದ ಶ್ರೀ ಸವದಿಯವರು ಇದೇ ಸಂದರ್ಭದಲ್ಲಿ ಜಿಲ್ಲೆಯ ಎಲ್ಲ ವರ್ಗದ ಹಾಗು ವಿಶಿಷ್ಠ ರೀತಿಯ ಉತ್ತಮ ಸಹಕಾರಿ ಸಂಸ್ಥೆಗಳನ್ನು ಹಾಗು ಸೌಹಾರ್ದ ಸಹಕಾರಿ ಸಂಸ್ಥೆಗಳನ್ನು ಸನ್ಮಾನಿಸುವ ಕಾರ್ಯಕ್ರಮವಿದೆ. 97ನೇ ಸಂವಿಧಾನ ತಿದ್ದುಪಡಿಯ ನಂತರ ರಾಜ್ಯದಲ್ಲಿ ಸಹಕಾರ ಕಾಯ್ದೆಗಳಿಗೆ ಅನೇಕ ತಿದ್ದುಪಡಿಗಳಾಗಿವೆ. ಸಹಕಾರಿ ಸಂಸ್ಥೆಗಳಿಗೆ ಈ ತಿದ್ದುಪಡಿಗಳಿಂದ ಸರಿಪಡಿಸಲು ಪ್ರಯೋಜನವಾಗುವ ಬದಲಿಗೆ ಅನೇಕ ಆಡಳಿತಾತ್ಮಕ ಅನಾನುಕೂಲಗಳೆ ಹೆಚ್ಚಿಗೆ ಆಗಿರುವುದನ್ನು ಮನವಿಯನ್ನು ಮಾನ್ಯ ಸಹಕಾರ ಸಚಿವರಿಗೆ ಕೊಡಲಾಗುವುದು. ಎಂದು ತಿಳಿಸಿದರು. ■

ಕರ್ನಾಟಕದ ಉತ್ತಮ ಸೌಹಾರ್ದ ಸಹಕಾರಿ ಸಂಸ್ಥೆಗಳಾದ ಗಂಗಾವತಿಯ ಗಂಗಾಧರೇಶ್ವರ ಸೌಹಾರ್ದ ಸಹಕಾರಿ, ಹಾವೇರಿ ಜಿಲ್ಲೆಯ ಶ್ರೀ ಚನ್ನೆಶ ಪತ್ತಿನ ಸೌಹಾರ್ದ ಸಹಕಾರಿ ರಾಣೆಬೆನ್ನೂರ. ದಕ್ಷಿಣ ಕನ್ನ ಜಿಲ್ಲೆಯ ಶ್ರೀ ಸರಸ್ವತಿ ಪತ್ತಿನ ಸೌಹಾರ್ದ ಸಹಕಾರಿ ಪುತ್ತೂರು, ಗುಲ್ಬರ್ಗ ಜಿಲ್ಲೆಯ ಅಣ್ಣಬಸವಣ್ಣ ಪತ್ತಿನ ಸೌಹಾರ್ದ ಸಹಕಾರಿ ಮತ್ತು ಬೆಳಗಾವಿ ಜಿಲ್ಲೆಯ ಶ್ರೀ ಅರಿಹಂತ ಪತ್ತಿನ ಸೌಹಾರ್ದ ಸಹಕಾರಿ ಬೋರಗಾಂವ ಇವರುಗಳನ್ನು ಸನ್ಮಾನಿಸಲಾಯಿತು.

ಕ್ರೆಡಿಟ್ ಸಹಕಾರ ಸಂಘಗಳ ವಿಭಾಗದಲ್ಲಿ ಗುಲ್ಬರ್ಗಾ ದ ಚನ್ನಮಲ್ಲೇಶ ಸಹಕಾರ ಸಂಘ, ಧಾರವಾಡದ ಭಾವಸಾರ ಕ್ರೆಡಿಟ್ ಸಹಕಾರ ಸಂಘ, ವಿಜಾಪುರದ ವಿಜಾಪೂರ ಕ್ರೆಡಿಟ್ ಸಹಕಾರ ಸಂಘಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಅನೇಕ ಪ್ರಮುಖ ವಿಷಯಗಳ ಬಗ್ಗೆ ತಜ್ಞರಿಂದ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ದೇಶದ 4000 ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು.

# ಸಂಯುಕ್ತ ಸಹಕಾರಿಯಿಂದ ಸಿ.ಬಿ.ಡಿ.ಟಿ.ಗೆ ಮನವಿ ಸಲ್ಲಿಕೆ




ಸೆಂಟ್ರಲ್ ಬೋರ್ಡ್ ಆಫ್ ಡೈರೆಕ್ಟ್ ಟ್ಯಾಕ್ಸಸ್ ತಂಡದ ಸದಸ್ಯೆ ಶ್ರೀಮತಿ ಸಿನ್ಹಾರವರಿಗೆ ಸಂಯುಕ್ತ ಸಹಕಾರಿ ವತಿಯಿಂದ 80(P)(2A)(I) ವಿನಾಯಿತಿ ಇರುವುದನ್ನು ತೆರಿಗೆ ಅಧಿಕಾರಿಗಳಿಂದ ತೊಂದರೆಯಾಗದಂತೆ ನಿರ್ದೇಶನ ನೀಡಲು ಹಾಗೂ ಪಿಗ್ಮಿ ಏಜೆಂಟರುಗಳ ಟಿಡಿಎಸ್ ಪ್ರಾವಧಾನದಿಂದ ವಿನಾಯಿತಿ ಕೋರಿ ಹಾಗೂ ಸಂಯುಕ್ತ ಸಹಕಾರಿಯ ಇ-ಸ್ಟಾಂಪಿಂಗ್ ವಿಭಾಗದಲ್ಲಿ ಎರಡು ಹಂತದ ಟಿಡಿಎಸ್ ತಪ್ಪಿಸಿ, ಒಂದೇ ಹಂತದ ಟಿಡಿಎಸ್ ಜಾರಿಗೊಳಿಸುವಂತೆ ಮನವಿ ಸಲ್ಲಿಸಲಾಯಿತು.

# ದಿನಾಂಕ : 20-11-2014 ರಂದು ಬೆಳಗಾವಿಯ ಗಾಂಧೀಭವನದಲ್ಲಿ 61ನೇ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭಕ್ಕೆ ಸಿದ್ಧತೆ



ದಿನಾಂಕ : 14-11-2014 ರಿಂದ 20-11-2014ರ ವರೆಗೆ ಆಚರಿಸಲಾಗುವ 61ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಅಂಗವಾಗಿ ದಿನಾಂಕ : 20-11-2014 ರಂದು ಸಮಾರೋಪ ಸಮಾರಂಭವನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ತೋಟಗಾರಿಕಾ ಸಹಕಾರ ಮಹಾಮಂಡಳ, ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ಬೆಳಗಾವಿ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ, ಬೆಳಗಾವಿ ಜಿಲ್ಲಾ ಸಹಕಾರ ಯೂನಿಯನ್, ಬೆಳಗಾವಿ ಜಿಲ್ಲೆಯ ಎಲ್ಲಾ ಸಹಕಾರ ಸಂಸ್ಥೆಗಳು, ಸೌಹಾರ್ದ ಸಹಕಾರಿ ಸಂಸ್ಥೆಗಳು ಇವರುಗಳ ಸಹಯೋಗದೊಂದಿಗೆ ಆಚರಿಸಲು ತೀರ್ಮಾನಿಸಿದೆ. ಈ ಹಿನ್ನೆಲೆಯಲ್ಲಿ ದಿನಾಂಕ : 27.10.2014 ರಂದು ನಗರದ ಬಿ.ಡಿ.ಸಿ.ಸಿ.ಬ್ಯಾಂಕಿನ ಸಭಾಭವನದಲ್ಲಿ ಪೂರ್ವಭಾವಿ ಸಿದ್ಧತಾ ಸಭೆಯನ್ನು ಬಿ.ಡಿ.ಸಿ.ಸಿ. ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಎಮ್.ಬಿ.ದೊಡ್ಡಗೌಡರ ಹಾಗೂ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ ಇವರ ಜಂಟಿ ಅಧ್ಯಕ್ಷತೆಯಲ್ಲಿ ಜರಗಿದ್ದು, ಸಹಕಾರಿ ಸಪ್ತಾಹದ ಸಮಾರೋಪ ಸಮಾರಂಭವನ್ನು ಬೆಳಗಾವಿಯಲ್ಲಿ ಪರಿಣಾಮಕಾರಿಯಾಗಿ ಆಚರಿಸಲು ನಿರ್ಧರಿಸಲಾಯಿತು.

ಕಾರ್ಯಕ್ರಮದಲ್ಲಿ ರಾಜ್ಯದ ಘನವೆತ್ತ ರಾಜ್ಯಪಾಲರನ್ನು, ಸಹಕಾರ ಸಚಿವರನ್ನು, ಜಿಲ್ಲಾ ಉಸ್ತುವಾರಿ ಸಚಿವರನ್ನು, ಜಿಲ್ಲೆಯ ಸಂಸದರು, ಶಾಸಕರುಗಳನ್ನು ಆಮಂತ್ರಿಸಿ ಜಿಲ್ಲೆಯ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವ ಸಹಕಾರಿ ಕ್ಷೇತ್ರವನ್ನು ಬಲಪಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದೆಂದು ನಿರ್ಣಯಿಸಲಾಯಿತು. ಇದೇ ಸಂದರ್ಭದಲ್ಲಿ ಸಹಕಾರ ಸಂಸ್ಥೆಗಳಲ್ಲಿ ಸದಸ್ಯ ಸೇವೆಗಳನ್ನು ಬಲಪಡಿಸುವಿಕೆ ಮತ್ತು ಭಾಗವಹಿಸುವಿಕೆ ದಿನ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ, ಉತ್ತಮ ಸಹಕಾರಿ ಸಂಸ್ಥೆಗಳಿಗೆ ಹಾಗೂ ಉತ್ತಮ ಸಹಕಾರಿಗಳಿಗೆ ಸನ್ಮಾನಿಸುವುದೆಂದು ತೀರ್ಮಾನಿಸಲಾಯಿತು. ವಿವಿಧ ಸಮಿತಿಗಳನ್ನು ರಚಿಸಲಾಯಿತು.

ಈ ಸಭೆಯಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರಿನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ, ನಿಪ್ಪಾಣಿ ಶಾಸಕರಾದ ಶ್ರೀಮತಿ ಶಶಿಕಲಾ ಜೊಲ್ಲೆ, ಕೆ ಓ ಎಫ್ ಅಧ್ಯಕ್ಷರಾದ ಶ್ರೀ ಅಣ್ಣಾಸಾಹೇಬ ಜೊಲ್ಲೆ, ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ಶಿವು ಕುಲಕರ್ಣಿ, ಉಪನಿಬಂಧಕರಾದ ಶ್ರೀ ಕಲ್ಲಪ್ಪಾ ಓಬಣ್ಣಗೋಳ, ವಿವಿಧ ಮಹಾಮಂಡಳದ ನಿರ್ದೇಶಕರುಗಳು, ಸಂಯುಕ್ತ ಸಹಕಾರಿಯ ಆಮಂತ್ರಿತ ನಿರ್ದೇಶಕರುಗಳಾದ ಶ್ರೀ ಶ್ರೀಕಾಂತ ಹತನೂರೆ, ಶ್ರೀ ಜಯಾನಂದ ಜಾಧವ, ಶ್ರೀ ಮಹಾತೇಂಶ ಪಾಟೀಲ್, ಜಿಲ್ಲಾ ಸಹಕಾರಿ ಯೂನಿಯನ್‌ನ ಅಧ್ಯಕ್ಷರಾದ ಶ್ರೀ ಡಿ.ಬಿ.ಪಾಟೀಲ್, ನಿರ್ದೇಶಕರಾದ ಶ್ರೀ ಬಿ.ಎಸ್.ಸುಲ್ತಾನಪೂರೆ ಸೇರಿದಂತೆ ಜಿಲ್ಲೆಯ ಹಿರಿಯ ಸಹಕಾರಿಗಳು ಭಾಗವಹಿಸಿದರು. ಸ್ವಾಗತವನ್ನು ಸಹಕಾರ ಇಲಾಖೆಯ ಜಂಟಿ ನಿಬಂಧಕರಾದ ಶ್ರೀ ಶಿವಕುಲಕರ್ಣಿ ನೆರವೇರಿಸಿದರು. ವಂದನಾರ್ಪಣೆಯನ್ನು ಉಪನಿಬಂಧಕರಾದ ಶ್ರೀ ಕಲ್ಲಪ್ಪಾ ಓಬಣ್ಣಗೋಳ ಹಾಗೂ ನಿರೂಪಣೆಯನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ನೆರವೇರಿಸಿದರು.

# ಅಂಡಮಾನ್ ನಿಕೊಬಾರ್‌ನ ಪೋರ್ಟ್‌ಬ್ಲೇರ್‌ನಲ್ಲಿ ಸಹಕಾರ ಕಾಯ್ದೆಗಳು : ಸಹಕಾರ ಕ್ಷೇತ್ರದ ದಶಕದ ನೀಲಿ ನಕ್ಷೆ ಕುರಿತಾದ ಕಾರ್ಯಾಗಾರ ದೇಶದ ವಿವಿಧ ಸಹಕಾರ ಕಾಯ್ದೆಗಳ ಹಾಗೂ ಸಹಕಾರ ಕ್ಷೇತ್ರದ ವಿಸ್ತೃತ ವ್ಯಾಪ್ತಿಯ ಅಧ್ಯಯನಕ್ಕೆ ಅವಕಾಶ - ಗುರುನಾಥ ಜಾಂತಿಕರ



ಪೂನಾದ ವೈಕುಂಠ ಮೆಹತಾ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆಯವರು ದಿನಾಂಕ 17–10–2014 ರಿಂದ 21–10–2014ರ ವರೆಗೆ ಏರ್ಪಡಿಸಿದ್ದ ಸಹಕಾರ ಕಾಯ್ದೆಗಳು : ಸಹಕಾರ ಕ್ಷೇತ್ರದ 2011–2020 ಒಂದು ದಶಕದ ನೀಲಿನಕ್ಷೆ ಕುರಿತಾದ ಕಾರ್ಯಾಗಾರವು ಸಹಕಾರ ಕ್ಷೇತ್ರದ ವಿಸ್ತೃತತೆಯನ್ನು ಮತ್ತು ಸಹಕಾರ ಕಾಯ್ದೆಗಳ ಆಳಗಳನ್ನು ಮತ್ತು ಕ್ರಿಯಾ ಯೋಜನೆಗಳ ಅಧ್ಯಯನ ಮಾಡುವ ನಿಟ್ಟಿನಲ್ಲಿ ಅತ್ಯಂತ ಮಹತ್ವದ್ದಾಗಿತ್ತು.



2012 ಅಂತರ ರಾಷ್ಟ್ರೀಯ ಸಹಕಾರ ವರ್ಷ ಸಹಕಾರ ಕ್ಷೇತ್ರದ ಬೆಳವಣಿಗೆ ದೃಷ್ಟಿಯಿಂದ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಈ ಕ್ಷೇತ್ರದ ಅಸ್ತಿತ್ವದ ಬಗ್ಗೆ ಈ ಕ್ಷೇತ್ರ ದೇಶಗಳ ಸಂಕಷ್ಟ ಕಾಲದಲ್ಲೂ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲವು ಎಂಬುದನ್ನು ಸಾಬೀತು ಪಡಿಸಿವೆ.

ವಿಶ್ವದ ವಿವಿಧ ದೇಶಗಳಲ್ಲಿ ವಿವಿಧ ರೀತಿಯ ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆಯಾದರೂ ಈ ಬಗ್ಗೆ ಸಾರ್ವಜನಿಕವಾಗಿ ಶ್ಲಾಘನೆಗಿಂತ ನಿಂದನೆಗಳೇ ಹೆಚ್ಚು. ಸಹಕಾರ ಕ್ಷೇತ್ರದ ಕಾರ್ಯನಿರ್ವಹಣೆ ಬಗ್ಗೆ ಸಕಾರಾತ್ಮಕ ಒಲವು ಮೂಡಿಸುವ ಕಾರ್ಯ ನಕಾರಾತ್ಮಕ ಧೋರಣೆಗಳನ್ನು ಹೋಗಲಾಡಿಸುವಲ್ಲಿ ಸಹಕಾರಿ ಕಾರ್ಯಕರ್ತರುಗಳು ನಿರ್ವಹಿಸಬೇಕಾಗಿರುವ ಪಾತ್ರದ ಅರಿವು ಮೂಡಿಸುವ ಕಾರ್ಯಾಗಾರ ಇದಾಗಿತ್ತು. ಅಂತರರಾಷ್ಟ್ರೀಯ ಸಹಕಾರ ಮೈತ್ರಿ ಸಂಸ್ಥೆಯವರು ಸಿದ್ಧಪಡಿಸಿದ ಸಮಗ್ರ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ನೀಲ ನಕ್ಷೆಯನ್ನು ಸಾರ್ವಜನಿಕರಿಗೆ ಪರಿಚಯಿಸುವುದು ಅಗತ್ಯವಾಗಿದ್ದುದರ ಹಿನ್ನೆಲೆಯಲ್ಲಿ ಸಹಕಾರ ಕ್ಷೇತ್ರದ ಕಾರ್ಯಕರ್ತರುಗಳು ತಿಳಿದಿರಬೇಕಾದ ಹಿನ್ನೆಲೆಯಲ್ಲಿ ಈ ಕಾರ್ಯಾಗಾರ ಮಹತ್ವತೆಯನ್ನು ಪಡೆದಿತ್ತು.

97ನೇ ಸಂವಿಧಾನ ತಿದ್ದುಪಡಿಯಿಂದ ಸಹಕಾರ ಕ್ಷೇತ್ರಕ್ಕೆ ಸಂವಿಧಾನಾತ್ಮಕ ಮನ್ನಣೆ ದೊರಕುವ ಸಂದರ್ಭದಲ್ಲಿ ಲೋಕಸಭೆಯಲ್ಲಿ ಸುಮಾರು 15ಕ್ಕಿಂತಲೂ ಹೆಚ್ಚು ಸಂಸದರು ಹಾಗೂ ರಾಜ್ಯ ಸಭೆಯಲ್ಲಿ 25ಕ್ಕೂ ಹೆಚ್ಚು ಸದಸ್ಯರು ಪಕ್ಷಾತೀತವಾಗಿ ಸಹಕಾರ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸಿ ಸಲಹೆ ಸೂಚನೆಗಳನ್ನು ನೀಡಿ ಸಹಕಾರ ಕ್ಷೇತ್ರದ ಸ್ವಾಯತ್ತತೆ, ಪಾರದರ್ಶಕತೆ, ವೃತ್ತಿಪರತೆಯ ಬಗ್ಗೆ ವ್ಯಕ್ತಪಡಿಸಿದ ಕಾಳಜಿಗಳನ್ನು ಅಧ್ಯಯನ ಮಾಡಲು ಅವಕಾಶವಾಯಿತು.

ಬ್ರಿಟೀಷರ ಆಡಳಿತದಲ್ಲಿ ನಮ್ಮ ದೇಶದ ಸ್ವಾತಂತ್ರ್ಯ ಸೇನಾನಿಗಳಿಗೆ ನೀಡುತ್ತಿದ್ದ ಕಾಲಾಪಾನಿಗಳಂತಹ ಶಿಕ್ಷೆಯ ಜಾಗಗಳು ಪೋರ್ಟ್‌ಬ್ಲೇರ್‌ನಲ್ಲಿ ಇಂದು ಅತ್ಯಂತ ಪ್ರಮುಖ ಪ್ರವಾಸಿ ತಾಣಗಳಾಗಿವೆ. ಇದರ ಜೊತೆಗೆ ನಾಗರೀಕತೆಯ ಸೋಂಕು ತಾಗದೇ ಹಾಗೆ ಕಾಡುಜನರ ಜೀವನವನ್ನು ನಡೆಸುವ ಜನರಿದ್ದಾರೆ ಎಂಬುದನ್ನು ನೋಡುವ ಹಾಗೂ ಅವರುಗಳ ಅಭಿವೃದ್ಧಿಗಾಗಿ ಅನೇಕ ಸ್ವಯಂಸೇವಾ ಸಂಸ್ಥೆಗಳು ಜಾರಿಮಾಡುತ್ತಿರುವ ಅನೇಕ ಯೋಜನೆಗಳ ಅಧ್ಯಯನಕ್ಕೆ ಈ ತರಬೇತಿ ಕಾರ್ಯಾಗಾರ ಪ್ರಯೋಜನವಾಯಿತು. ಸಂಯುಕ್ತ ಸಹಕಾರಿಯ ವತಿಯಿಂದ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವರವರು, ದೇಶದ ವಿವಿಧ ರಾಜ್ಯಗಳ 28 ಜನ ಸಹಕಾರಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. “ಸಹಕಾರಂ ಗೆಲ್ಗೆ”

### ನಗರ ಯಶಸ್ವಿನಿ ಅನುಷ್ಠಾನ ಪರಿಶೀಲನಾ ಸಭೆ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ ಕಾರ್ಯಾಗಾರ

## ಸೌಹಾರ್ದ ಸಹಕಾರ ಕ್ಷೇತ್ರದ ಪಾಲ್ಗೊಳ್ಳುವಿಕೆ ಶ್ಲಾಘನೀಯ - ಶ್ರೀ ಹೆಚ್.ಎಸ್. ನಾಗರಾಜಯ್ಯ

ಅಪರ ನಿಬಂಧಕರಾದ ಶ್ರೀ ಹೆಚ್ ಎಸ್ ನಾಗರಾಜಯ್ಯ ಇವರು ಸಂಯುಕ್ತ ಸಹಕಾರಿಯು ಆಯೋಜಿಸಿದ್ದ "ನಗರ ಯಶಸ್ವಿನಿ ಅನುಷ್ಠಾನ ಪರಿಶೀಲನಾ ಸಭೆ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ ಕಾರ್ಯಾಗಾರ"ವನ್ನು ಉದ್ಘಾಟಿಸಿ ಮಾತನಾಡುತ್ತಾ – ಸಂಯುಕ್ತ ಸಹಕಾರಿಯು ಕಡಿಮೆ ಅವಧಿಯಲ್ಲಿ ಮಹತ್ವದ ಸಾಧನೆಯನ್ನು ಮಾಡಿದೆ, ಸಂಯುಕ್ತ ಸಹಕಾರಿಯು ಆಯೋಜಿಸುವ ತರಬೇತಿ ಹಾಗೂ ಕಾರ್ಯಕ್ರಮಗಳ ಗುಣಮಟ್ಟ ಅತ್ಯುತ್ತಮವಾಗಿದ್ದು, ಸೌಹಾರ್ದ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿದೆ. ಸರ್ಕಾರದ ಯೋಜನೆಯನ್ನು ಜನರಿಗೆ ತಲುಪಿಸುವಲ್ಲಿ ಸೌಹಾರ್ದ ಸಹಕಾರಿಗಳು ಪಾಲ್ಗೊಳ್ಳಲು ಅನುಕೂಲವಾಗುವಂತೆ ಕಾರ್ಯಕ್ರಮಗಳನ್ನು ಸಂಯುಕ್ತ ಸಹಕಾರಿಯು ಆಯೋಜಿಸುತ್ತಿರುವುದು ಹಾಗೂ ಇಂತಹ ಯೋಜನೆಗಳನ್ನು ಜನರಿಗೆ ತಲುಪಿಸುವಲ್ಲಿ ಸೌಹಾರ್ದ ಸಹಕಾರ ಕ್ಷೇತ್ರದ ಪಾಲ್ಗೊಳ್ಳುವಿಕೆ ಶ್ಲಾಘನೀಯ ಎಂದು ತಿಳಿಸಿದರು.



ದಿನಾಂಕ 18 ಅಕ್ಟೋಬರ್ 2014, ಶನಿವಾರದಂದು ಹೋಟೆಲ್ ಪಾರಿಜಾತಾ ಗೇಟ್‌ವೇ, ಡಾ.ರಾಜಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು ಇಲ್ಲಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ "ನಗರ ಯಶಸ್ವಿನಿ ಅನುಷ್ಠಾನ ಪರಿಶೀಲನಾ ಸಭೆ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ ಕಾರ್ಯಾಗಾರ"ವನ್ನು ಬೆಂಗಳೂರು ನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗಾಗಿ ಆಯೋಜಿಸಲಾಗಿತ್ತು.

## ಸದಸ್ಯರ ಆರೋಗ್ಯ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಲು ಸಹಕಾರ ಸಂಸ್ಥೆಗಳಿಗೆ ಅವಕಾಶ - ಶ್ರೀ ಬಿ.ಸಿ. ಸತೀಶ್

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಬೆಂಗಳೂರು ಪ್ರಾಂತದ ಮಾನ್ಯ ಸಹಕಾರಿಗಳ ಜಂಟಿ ನಿಬಂಧಕರಾದ ಶ್ರೀ ಬಿ.ಸಿ. ಸತೀಶ್ ಇವರು ನಗರ ಯಶಸ್ವಿನಿ ಯೋಜನೆಯು ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಶಸ್ತ್ರ ಚಿಕಿತ್ಸಾ ಸೌಲಭ್ಯವನ್ನು ಹೊಂದಿರುವ ಯೋಜನೆಯಾಗಿದ್ದು, ಸಹಕಾರಿಯ ಸದಸ್ಯರನ್ನು ಈ ಯೋಜನೆ ಯಡಿ ನೋಂದಾಯಿಸುವುದರ ಮೂಲಕ ಸದಸ್ಯರ ಆರೋಗ್ಯ ರಕ್ಷಣೆಯಲ್ಲಿ ಕೂಡ ಸಹಕಾರ ಸಂಸ್ಥೆಗಳು ಮಹತ್ವದ ಪಾತ್ರ ವಹಿಸಲು ಅವಕಾಶ ಸಿಕ್ಕಂತಾಗಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ವಹಿಸಿದ್ದರು. ಇವರು ಮಾತನಾಡಿ ನಗರ ಯಶಸ್ವಿನಿ ಯೋಜನೆಯ ಜಾರಿಯಲ್ಲಿ ಸೌಹಾರ್ದ ಸಹಕಾರಿಗಳು ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸುವಂತೆ ಸಹಕಾರ ಇಲಾಖೆಯ ಹಿರಿಯ ಅಧಿಕಾರಿಗಳಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಬೆಂಗಳೂರು ಕೇಂದ್ರ, ಉತ್ತರ ಹಾಗೂ ದಕ್ಷಿಣ ವಲಯದ ಉಪನಿಬಂಧಕರುಗಳಾದ ಶ್ರೀ ಅಶ್ವತ್ಥ ನಾರಾಯಣ, ಶ್ರೀ ವೆಂಕಟೇಶ ಎನ್ ಹಾಗೂ ಶ್ರೀ ಕೆ ಎಲ್ ನರಸಿಂಹಮೂರ್ತಿ ಇವರುಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಉಪನಿಬಂಧಕರಾದ ಶ್ರೀ ಕೆ ಎನ್ ನಂಜುಂಡೇಗೌಡ ಇವರು ಉಪಸ್ಥಿತರಿದ್ದು, ಅನುಷ್ಠಾನದ ಕುರಿತಂತೆ ಪ್ರಗತಿ ಪರಿಶೀಲನೆಯ ಕಾರ್ಯವನ್ನು ನಡೆಸಿದರು.

**ಸೌಹಾರ್ದ ಕಾಯ್ದೆ ತಿದ್ದುಪಡಿ ಕಾರ್ಯಾಗಾರ :** ಮಧ್ಯಾಹ್ನದ ಅವಧಿಯಲ್ಲಿ ಸಂಯುಕ್ತ ಸಹಕಾರಿಯ ಸಹಪ್ರಧಾನ ವ್ಯವಸ್ಥಾಪಕರಾದ ಶ್ರೀ ಶ್ರೀಕಾಂತ ಇವರು 2014ರಲ್ಲಿ ಸೌಹಾರ್ದ ಸಹಕಾರಿ ಕಾಯ್ದೆಗೆ ಮಾಡಲಾದ ತಿದ್ದುಪಡಿಗಳು ಹಾಗೂ ಅವುಗಳ ಪರಿಣಾಮಗಳ ಕುರಿತು ಮಾಹಿತಿ ನೀಡಿದರು. ನಂತರದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ವ್ಯಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ ಪಾಟೀಲ್ ಇವರು ಪ್ರಶ್ನೋತ್ತರ ಅವಧಿಯನ್ನು ನಡೆಸಿಕೊಟ್ಟರು.

# ಕೂಡಲ ಸಂಗಮದಲ್ಲಿ ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ 10 ದಿನಗಳ ವ್ಯಕ್ತಿತ್ವ ವಿಕಸನದ 12ನೇ ತಂಡದ ತರಬೇತಿ ಕಾರ್ಯಕ್ರಮ

ಸೌಹಾರ್ದ ಸಹಕಾರಿಗಳ ಸಿಬ್ಬಂದಿಯವರಿಗಾಗಿ ಸಂಯುಕ್ತ ಸಹಕಾರಿಯು ಕಳೆದ 5 ವರ್ಷಗಳಿಂದ ಪ್ರತಿ 6 ತಿಂಗಳಿಗೊಮ್ಮೆ ಏರ್ಪಡಿಸುತ್ತಿರುವ 10 ದಿನಗಳ ವ್ಯಕ್ತಿತ್ವ ವಿಕಸನ ತರಬೇತಿ ಕಾರ್ಯಕ್ರಮದ 12ನೇ ತಂಡವನ್ನು ದಿನಾಂಕ : 17–12–2014 ರಿಂದ 26–12–2014ರವರೆಗೆ ಜೈನ ಯಾತ್ರಿ ನಿವಾಸ ಕೂಡಲ ಸಂಗಮ, ಬಾಗಲಕೋಟೆ ಜಿಲ್ಲೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ರಾಜ್ಯದ ಸೌಹಾರ್ದ ಸಹಕಾರಿಗಳು ತಮ್ಮ ಸಂಸ್ಥೆಯ ಸಿಬ್ಬಂದಿಯವರನ್ನು ಕಳುಹಿಸಿಕೊಡಲು ಕೋರಿದೆ. ಮಹಿಳೆಯರಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ಇರುತ್ತದೆ.

## 10 ದಿನಗಳ ತರಬೇತಿ ಅವಧಿಯಲ್ಲಿ ವಿಷಯಗಳು

- ಸಹಕಾರ – ಸಹಕಾರ ಸಂಘ – ಸಹಕಾರ ತತ್ವಗಳು–ಸಹಕಾರ ಕಾಯ್ದೆ – ಸಹಕಾರ ಚಳುವಳಿಯ ಹುಟ್ಟು – ಬೆಳವಣಿಗೆ–ಸಾಧನೆಗಳು.
- ಸೌಹಾರ್ದ ಸಹಕಾರ ಕಾಯ್ದೆ ಆಶಯ – ಹುಟ್ಟು, ಬೆಳವಣಿಗೆ – ಸಹಕಾರ ಕಾಯ್ದೆ ಹಾಗೂ ಸೌಹಾರ್ದ ಸಹಕಾರ ಕಾಯ್ದೆ ವ್ಯತ್ಯಾಸಗಳು – ಕಾಯ್ದೆಯ ಮುಖ್ಯಾಂಶಗಳು – ಸೌಹಾರ್ದ ಸಹಕಾರಿಗಳ ಉಪವಿಧಿಗಳು – ತಿದ್ದುಪಡಿ ವಿಧಾನ – ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳು – ಸಹಕಾರ ಕ್ಷೇತ್ರದ ಪ್ರಚಲಿತ ವಿಷಯಗಳು.
- ಕಚೇರಿ ಆಡಳಿತ ನಿರ್ವಹಣೆ – ಕಡತಗಳ ನಿರ್ವಹಣೆ – ಸಮಯ ಪಾಲನೆ
- ಸೌಹಾರ್ದ ಸಹಕಾರಿಗಳ ಆಡಳಿತ ನಿರ್ವಹಣೆ – ಸಭೆಗಳು – ಆಡಳಿತ ಮಂಡಲಿ ಸಭೆ – ವಾರ್ಷಿಕ ಸಾಮಾನ್ಯ ಸಭೆ – ವಿಶೇಷ ಸಭೆ – ಪ್ರಾಯೋಗಿಕ.
- ಸೌಹಾರ್ದ ಸಹಕಾರಿಗಳ ಲೆಕ್ಕಪತ್ರಗಳ ನಿರ್ವಹಣೆ – ಜಮಾ ಖರ್ಚು – ಲಾಭ ನಷ್ಟ ಖಾತೆ – ಆಸ್ತಿ ಜವಾಬ್ದಾರಿ ತಃಖ್ತೆ – ಬ್ಯಾಂಕ್ ಸಮನ್ವಯ ಪಟ್ಟಿ ಸಿದ್ಧಪಡಿಸುವುದು – ಪ್ರಾಯೋಗಿಕ.
- ಹಣಕಾಸಿನ ನಿರ್ವಹಣೆ – ಸಂಪನ್ಮೂಲಗಳ ಕ್ರೋಢೀಕರಣ ಹಾಗೂ ಲಾಭದಾಯಕ ಹೂಡಿಕೆ – ಬಡ್ಡಿಯೇತರ ಆದಾಯಗಳು.
- ಸಾಲಗಳ ನಿರ್ವಹಣೆ – ಗುಣಮಟ್ಟಗಳ ಸಾಲ ನೀಡಿಕೆ – ಸಾಲ ವಸೂಲಾತಿ ಕ್ರಮಗಳು – ಮಾರಾಟಗಾರನ ಕರ್ತವ್ಯಗಳು.
- ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿಷಯಗಳು – ಗ್ರಾಹಕ ಸೇವೆಗಳ ನಿರ್ವಹಣೆ – ಒತ್ತಡ ನಿರ್ವಹಣೆ.
- ವ್ಯಕ್ತಿತ್ವ ವಿಕಸನ – ಮಾನವೀಯ ಮೌಲ್ಯಗಳ ನಿರ್ವಹಣೆ – ಆಂತರಿಕ ಸಂಬಂಧಗಳ ನಿರ್ವಹಣೆ.
- ಪ್ರತಿ ದಿನ ಬೆಳಿಗ್ಗೆ ಯೋಗ – ಸಂಜೆ ಅನೌಪಚಾರಿಕ ಸಭೆಗಳು – 2 ದಿನಗಳ ಅಧ್ಯಯನ ಪ್ರವಾಸ.

**ಪ್ರತಿನಿಧಿ ಶುಲ್ಕ ತಲಾ ರೂ. 5,000/–. ಕಾರ್ಯಕ್ರಮಕ್ಕೆ ಬಂದು ಹೋಗುವ ಪ್ರಯಾಣ ವೆಚ್ಚವನ್ನು ಸಂಬಂಧಿಸಿದ ಸೌಹಾರ್ದ ಸಹಕಾರಿಗಳಿಂದ ಭರಿಸಬೇಕು. ನೋಂದಣಿಯ ಕೊನೆಯ ದಿನಾಂಕ : 5–12–2014.**

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳಲ್ಲಿ ವಾರ್ಷಿಕ ಸಾಮಾನ್ಯ ಸಭೆ ಹಾಗೂ ವಿವಿಧ ಕಾರ್ಯಕ್ರಮಗಳು



## ಯಾದಗಿರಿ ಜಿಲ್ಲಾ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆ

ದಿನಾಂಕ : 20.10.2014 ರಂದು ಯಾದಗಿರಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರ, ನಿರ್ದೇಶಕರ ಹಾಗೂ ಮುಖ್ಯಕಾರ್ಯನಿರ್ವಾಹಕರ "ಅವಲೋಕನಾ ಸಭೆ"ಯನ್ನು ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಪತ್ತಿನ ಸಹಕಾರಿ ನಿ., ಯಾದಗಿರಿ ಇಲ್ಲಿ ಆಯೋಜಿಸಲಾಗಿತ್ತು. ಈ ಅವಲೋಕನಾ ಸಭೆಯಲ್ಲಿ ಯಾದಗಿರಿ ಜಿಲ್ಲೆಯ 10 ಸೌಹಾರ್ದ ಸಹಕಾರಿಗಳಿಂದ 25 ಸಹಕಾರಿಗಳು ಆಗಮಿಸಿದ್ದರು.



ಶ್ರೀ ಅಕ್ಷಯ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸಹಕಾರಿಯ 4ನೇ ಸರ್ವ ಸದಸ್ಯರ ವಾರ್ಷಿಕ ಸಭೆ.



ಶ್ರೀ ಗುರು ಸೌಹಾರ್ದ ಪತ್ತಿನ ಸಹಕಾರಿ ನಿ., ಗುಲ್ಬರ್ಗಾ ಸಹಕಾರಿಯ 3ನೇ ವಾರ್ಷಿಕ ಸಾಮಾನ್ಯ ಸಭೆ.



ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಧುಪದಾಳ–ಘಟಪ್ರಭಾ ಸಹಕಾರಿಯ 6ನೇ ವಾರ್ಷಿಕ ಸರ್ವ ಸಾಧಾರಣ ಸಭೆ.



ಜಂಗಮ ಸೌಹಾರ್ದ ಸಹಕಾರಿ ನಿ., ದಾವಣಗೆರೆ ಸಹಕಾರಿಯ ಸರ್ವ ಸದಸ್ಯರ ಮಹಾಸಭೆ. ಇದೇ ಸಂದರ್ಭದಲ್ಲಿ ಸದಸ್ಯರ ಪ್ರತಿಭಾನ್ವಿತ ಮಕ್ಕಳನ್ನು ಸನ್ಮಾನಿಸಲಾಯಿತು.



ಶ್ರೀ ಸದಾನಂದ ಸೌಹಾರ್ದ ಪತ್ತಿನ ಸಹಕಾರಿ ನಿ., ತಾಳಿಕೋಟಿ ಸಹಕಾರಿಯ ಪ್ರಥಮ ಶಾಖೆಯ ಉದ್ಘಾಟನೆ.



ಶ್ರೀ ಕನ್ನಿಕಾಪರಮೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯಿಂದ ಜಮ್ಮು ಮತ್ತು ಕಾಶ್ಮೀರ ಪ್ರವಾಹ ಸಂತ್ರಸ್ತರಿಗೆ ಪರಿಹಾರ ನಿಧಿ ಸಂಗ್ರಹಣೆ.



ಮಂಡ್ಯ ಜಿಲ್ಲಾ ಶ್ರೀ ಶ್ರೀ ಜಗಜ್ಯೋತಿ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿ ನಿ., ಮಂಡ್ಯ ಸಹಕಾರಿಯ ಸಾಮಾನ್ಯ ಸಭೆ.



ಓಂ ಶ್ರೀ ಸಾಯಿ ಬಾಲಾಜಿ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಹಾವೇರಿ ಸಹಕಾರಿಯ 2ನೇ ವರ್ಷದ ಸರ್ವ ಸಾಧಾರಣ ಸಭೆ.



ಪ್ರಗತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಶಿವಮೊಗ್ಗ ಸಹಕಾರಿಯ ಸಾಮಾನ್ಯ ಸಭೆ.




ಸಾಯಿ ಗಣೇಶ ಸೌಹಾರ್ದ ಕ್ರೆಡಿಟ್ ಕೋ–ಆಪರೇಟಿವ್ ಲಿ., ಉಡುಪಿ ಸಹಕಾರಿಯ 13ನೇ ವರ್ಷದ ಮಹಾಸಭೆ.



ಶ್ರೀ ಭುವನೇಂದ್ರ ಸ್ವಾಮೀಜಿ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಮಂಗಳೂರು ಸಹಕಾರಿಯ 4ನೇ ವಾರ್ಷಿಕ ಸಾಮಾನ್ಯ ಸಭೆ.



ಶ್ರೀ ಗುರುಕುಲ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ತುಮಕೂರು ಸಹಕಾರಿಯ 6ನೇ ಸರ್ವಸದಸ್ಯರ ಮಹಾಸಭೆ.



ಶ್ರೀ ಕೂಡಲಸಂಗಮ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ನೆಲಮಂಗಲ ಸಹಕಾರಿಯ ಪ್ರಪ್ರಥಮ ಸರ್ವಸದಸ್ಯರ ಮಹಾಸಭೆ. ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತರನ್ನು ಪುರಸ್ಕರಿಸಲಾಯಿತು.



ಶ್ರೀ ಮಹಾಲಕ್ಷ್ಮೀ ಸೌಹಾರ್ದ ಪತ್ತಿನ ಸಹಕಾರಿ ನಿ., ಶಹಾಪುರ ಸಹಕಾರಿಯ 4ನೇ ವಾರ್ಷಿಕ ಮಹಾಸಭೆ.



ಶ್ರೀ ಮಾತಾ ವೈಭವ ಮಹಾಲಕ್ಷ್ಮೀ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಕುಮಟಾ ಸಹಕಾರಿಯ 9ನೇ ವರ್ಷದ ವಾರ್ಷಿಕ ಸರ್ವಸದಸ್ಯರ ಸಭೆ.



ಶ್ರೀ ವೀರಭದ್ರೇಶ್ವರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಸವದತ್ತಿ ಸಹಕಾರಿಯ ವಾರ್ಷಿಕ ಸರ್ವ ಸಾಧಾರಣ ಸಭೆ.



ಸ್ವರ್ಣಭಾರತಿ ವಿವಿಧೋದ್ದೇಶ ಪತ್ತಿನ ಸೌಹಾರ್ದ ಸಹಕಾರಿ ನಿ., ಹಾಸನ ಸಹಕಾರಿಯ 9ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆ.



ತುಮಕೂರು ಜಿಲ್ಲಾ ಬಂಜಾರ ಸೌಹಾರ್ದ ಪತ್ತಿನ ಸಹಕಾರಿ ನಿ., ತುಮಕೂರು ಸಹಕಾರಿಯ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ.



ವಿಮಲ್ ಮಹಿಳಾ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೆಳಗಾವಿ ಸಹಕಾರಿಯ 14ನೇ ವಾರ್ಷಿಕ ಸರ್ವ ಸಾಧಾರಣ ಸಭೆ.



ವಿಪ್ರ ಕ್ರೆಡಿಟ್ ಸೌಹಾರ್ದ ಸಹಕಾರಿ ನಿ., ಧಾರವಾಡ ಸಹಕಾರಿಯ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆ.



ಶ್ರೀರಾಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ಬೈಂದೂರು ಸಹಕಾರಿಯ ಸರ್ವ ಸದಸ್ಯರ ಸಾಮಾನ್ಯ ಸಭೆ.



ಕವಲೇದುರ್ಗ ಬಹುಉದ್ದೇಶಿ ಸೌಹಾರ್ದ ಸಹಕಾರಿ ನಿ., ತೀರ್ಥಹಳ್ಳಿ ಸಹಕಾರಿಯ ಅಡಿಕೆ ಖರೀದಿ ಕೇಂದ್ರದ ಉದ್ಘಾಟನೆ ಹಾಗೂ 2013-14ನೇ ಸಾಲಿನ ಸರ್ವ ಸದಸ್ಯರ ಸಭೆ.



ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ ಮಧುಗಿರಿಯ ನವೀಕೃತ ಶಾಖೆಯ ಉದ್ಘಾಟನಾ ಸಮಾರಂಭ. ಇದೇ ಸಂದರ್ಭದಲ್ಲಿ ಶಾಸಕರು ಮತ್ತು ತುಮಕೂರು ಡಿ.ಸಿ.ಸಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ.ಎನ್. ರಾಜಣ್ಣನವರಿಗೆ ಸನ್ಮಾನಿಸಲಾಯಿತು.



ಶ್ರೀ ಬಸವೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿ., ಬಿಜಾಪುರ ಸಹಕಾರಿಯ ಸಿಂದಗಿ ಶಾಖೆಯ ಉದ್ಘಾಟನೆ.




ದಿ ಪಾವಗಡ ಸೌಹಾರ್ದ ಮಲ್ಟಿಪರ್ಪಸ್ ಕೋ–ಆಪರೇಟಿವ್ ಲಿ., ಕೋಲಾರ ಸಹಕಾರಿಯ ರಾಜಾಜಿನಗರ ಶಾಖೆಯ ವತಿಯಿಂದ ಸ್ವಚ್ಛ ಭಾರತಕ್ಕಾಗಿ ಸ್ವಚ್ಛತಾ ಅಭಿಯಾನ ಕಾರ್ಯಕ್ರಮ.

## ಕಾಯ್ದೆ ತಿದ್ದುಪಡಿಗಾಗಿ ಮನವಿ







ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ (ಅಧಿನಿಯಮ), 2014ಕ್ಕೆ ಮಾಡಿರುವ ಕೆಲವು ತಿದ್ದುಪಡಿಗಳನ್ನು ವಿರೋಧಿಸಿ ವಿಧಾನ ಸಭೆಯಲ್ಲಿ ವಿಷಯವನ್ನು ಪ್ರಸ್ತಾಪಿಸಲು ವಸತಿ ಸಚಿವ ಶ್ರೀ ಅಂಬರೀಶ್ ಹಾಗೂ ಪಾಂಡವಪುರ ಕ್ಷೇತ್ರದ ಶಾಸಕರಾದ ಶ್ರೀ ಕೆ.ಎಸ್.ಪುಟ್ಟಣ್ಣಯ್ಯ ಅವರಿಗೆ ಸಂಯುಕ್ತ ಸಹಕಾರಿಯ ಮಂಡ್ಯ ಜಿಲ್ಲಾ ಪ್ರತಿನಿಧಿ ಶ್ರೀ ನಾಗರಾಜು ಅವರು ಮನವಿ ಪತ್ರವನ್ನು ಸಲ್ಲಿಸಿದರು. ಮೂರನೇ ಚಿತ್ರದಲ್ಲಿ ಯಲಹಂಕ ಕ್ಷೇತ್ರದ ಶಾಸಕರಾದ ಶ್ರೀ ಎಸ್.ಆರ್.ವಿಶ್ವನಾಥ್‌ರವರಿಗೆ ಮಹಾಯೋಗಿ ವೇಮನ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಯಲಹಂಕ ಉಪನಗರ, ಬೆಂಗಳೂರು, ಇದರ ಅಧ್ಯಕ್ಷರಾದ ಶ್ರೀಯುತ ಎಂ. ಮುನಿರೆಡ್ಡಿಯವರು, ಉಪಾಧ್ಯಕ್ಷರಾದ ಶ್ರೀ ಎನ್. ವೇಮಾ ರೆಡ್ಡಿಯವರು ಮತ್ತು ಆಡಳಿತ ಮಂಡಲಿಯ ಸದಸ್ಯರು ಮನವಿ ಪತ್ರವನ್ನು ಸಲ್ಲಿಸಿದರು.

# ಅಪರಿಮಿತ ಅವಕಾಶಗಳ ಸಾಧ್ಯತೆ – ಸಹಕಾರ ಕ್ಷೇತ್ರ

**http://buldanaurban.in/**

■ ರಘುನಂದನ ಕೆ.
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.

ಸಮಾನ ವಿಚಾರಧಾರೆಯ ವ್ಯಕ್ತಿಗಳು ಒಂದೆಡೆ ಸೇರಿ ಕಾರ್ಯನಿರ್ವಹಿಸುವ ನಿಶ್ಚಯ ಮಾಡಿದಾಗ ಹೊಸ ಸಾಧ್ಯತೆಗಳ ಮಾರ್ಗದ ಆವಿಷ್ಕಾರವಾಗುತ್ತದೆ. ಹೊಸ ಯೋಚನೆಗಳು ಯೋಜನೆಗಳಾಗಿ ಮಹಾನ್ ಕಾರ್ಯ ಮಾಡುವ ಅವಕಾಶವನ್ನು ಸೃಷ್ಟಿಸುತ್ತದೆ. ಇಂತಹ ಸಾಧನೆಗಳು ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಸಹಕಾರ ಕ್ಷೇತ್ರ ಸಮಾನ ಮನಸ್ಕರು ಸೇರಿ ಪ್ರಾರಂಭಿಸಿದ ಸಂಸ್ಥೆಗಳ ವ್ಯವಸ್ಥೆ. ಇದರಲ್ಲಿ ಸಾಧನೆಗಳ, ಮಹತ್ಕಾರ್ಯಗಳ ಅವಕಾಶಗಳು ಹೆಚ್ಚು. ಸಹಕಾರಿಗಳು, ಸಹಕಾರ ಸಂಸ್ಥೆಗಳು ಪ್ರಯತ್ನ ಮಾಡಬೇಕಷ್ಟೆ. ಆರ್ಥಿಕತೆಯಲ್ಲಿ ಹಾಗೂ ಸೇವೆಯಲ್ಲಿ ಕಾರ್ಪೋರೇಟ್ ಸಂಸ್ಥೆಗಳಿಗೆ ಪೈಪೋಟಿ ನೀಡುವ ಮಟ್ಟಿಗೆ ಸಹಕಾರ ಸಂಸ್ಥೆಗಳು ಬೆಳೆದಿವೆ, ಬೆಳೆಯುತ್ತಿವೆ. ಸಾಮಾಜಿಕ ಜವಾಬ್ದಾರಿಯೊಂದಿಗೆ ಕಾರ್ಯನಿರ್ವಹಿಸುವಲ್ಲಿ ಸಹಕಾರ ಸಂಸ್ಥೆಗಳು ಮುಂಚೂಣಿಯಲ್ಲಿವೆ. ಕೆಎಮ್‌ಎಫ್, ಕ್ಯಾಂಪ್ಕೋ, ಅಮುಲ್, ಸೇವಾ, ಸಾರಸ್ವತ ಬ್ಯಾಂಕ್, ಕಾಸ್ಮೋಸ್ ಬ್ಯಾಂಕ್ ಇವೆಲ್ಲ ಸಹಕಾರ ಶಕ್ತಿಯಾಗಿ ಬೆಳೆದಿರುವ ಸಂಸ್ಥೆಗಳೇ. ಇಂತಹ ಇನ್ನಷ್ಟು ಸಂಸ್ಥೆಗಳು ಈ ಕ್ಷೇತ್ರದಿಂದ ಹೊರಹೊಮ್ಮಬೇಕಿದೆ.

ಗ್ರಾಮೀಣಾಭಿವೃದ್ಧಿಯ ಸಾಧನವಾಗಿ, ರೈತರ ಹಾಗೂ ಮಹಿಳೆಯರ ಆರ್ಥಿಕ ಸಬಲತೆಯ ಸಾಧ್ಯತೆಯಾಗಿ ಆರಂಭವಾದ ಸಹಕಾರ ಚಳುವಳಿ ಇಂದು ಎಲ್ಲಾ ಕ್ಷೇತ್ರಗಳನ್ನು ವ್ಯಾಪಿಸುತ್ತ ಸ್ವಾವಲಂಬನೆಯ ಮಾರ್ಗವನ್ನು ತೆರೆದಿಡುತ್ತ ಬೆಳೆಯುತ್ತ ಬಂದಿದೆ. ಅಂತಹದೇ ಸ್ವಾವಲಂಬನೆಯ ಮಾರ್ಗ ತೋರುತ್ತಾ ಶಿಕ್ಷಣ, ಉದ್ಯೋಗದಲ್ಲಿ ಹಿಂದುಳಿದ ಜಿಲ್ಲೆಯೊಂದನ್ನ ಅಭಿವೃದ್ಧಿಪಡಿಸಿದ, ಸಹಕಾರ ಕ್ಷೇತ್ರಕ್ಕೆ ಮಾದರಿಯಾಗುವಂತಹ ಸಂಸ್ಥೆಯೊಂದು ಮಹಾರಾಷ್ಟ್ರದ ಬುಲ್ಡಾನಾದಲ್ಲಿದೆ.

ಬುಲ್ಡಾನಾ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಬುಲ್ಡಾನಾ ಇದು 1986ರಲ್ಲಿ 72 ಸದಸ್ಯರೊಂದಿಗೆ ರೂ.12000/- ಷೇರು ಬಂಡವಾಳದೊಂದಿಗೆ ಆರಂಭವಾದ ಸಂಸ್ಥೆ. ಪ್ರಸ್ತುತ ಏಳು ರಾಜ್ಯಗಳಲ್ಲಿ 340 ಶಾಖೆಗಳನ್ನು, 300 ಗೋದಾಮುಗಳನ್ನು, ಐದು ಸಾವಿರ ಕೋಟಿ ಠೇವಣಿಯನ್ನು ಹೊಂದಿ ಕಾರ್ಯನಿರ್ವಹಿಸುತ್ತಿದೆ. ಈ ಸಂಸ್ಥೆಯ ಸಾಧನೆಯ ಮಾಹಿತಿ ಒದಗಿಸುವ ವೆಬ್‌ತಾಣದ




ಪರಿಚಯ ಇಲ್ಲಿದೆ.

**ವೆಬ್‌ತಾಣ 23 : http://buldanaurban.in/**

● ಬುಲ್ಡಾನಾ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಇದರ ಆರಂಭ, ಆಡಳಿತ ಮಂಡಳಿ ವಿವರ, ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರ ಮಾಹಿತಿ, ಈ ಸಹಕಾರಿಯು ಒದಗಿಸುವ ಆರ್ಥಿಕ ಸೇವೆ, ಸೌಲಭ್ಯಗಳ ವಿವರಗಳನ್ನು, ಸಾಲದ ಯೋಜನೆಗಳ ಮಾಹಿತಿಗಳನ್ನು ಈ ತಾಣದಲ್ಲಿ ನೋಡಬಹುದು.

● ಈ ತಾಣದಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ನೂತನ ಆಯಾಮಗಳಡಿಯಲ್ಲಿ ಈ ಸಂಸ್ಥೆಯಿಂದ ನಿರ್ವಹಿಸಲಾಗುತ್ತಿರುವ ಸಾಮಾಜಿಕ ಜವಾಬ್ದಾರಿಯ ವಿವರಗಳು – ಗೋಶಾಲೆ, ಆಂಬ್ಯುಲೆನ್ಸ್ ವ್ಯವಸ್ಥೆ, ಜೀವನ ಸಂಧ್ಯಾ ವೃದ್ಧಾಶ್ರಮ, ಸಹಕಾರ ವಿದ್ಯಾಮಂದಿರ ಎನ್ನುವ ಬೃಹತ್ ಶೈಕ್ಷಣಿಕ ಸಂಸ್ಥೆಗಳು, ನೂಲಿನ ಗಿರಣಿ, ವಿದ್ಯಾರ್ಥಿ ನಿಲಯಗಳು, ಕುಡಿಯುವ ನೀರಿನ ಎಟಿಎಮ್, ಸಹಕಾರ ತರಬೇತಿ ಸಂಸ್ಥೆ, ರೆಸಿಡೆನ್ಸಿ ಕ್ಲಬ್, ಮಾಹೂರ್ ಹಾಗೂ ತಿರುಪತಿಯ ಭಕ್ತ ನಿವಾಸಗಳ ಕಿರು ಮಾಹಿತಿ ಈ ವೆಬ್‌ತಾಣದಲ್ಲಿ ಲಭ್ಯವಿದೆ.

● ಸಂಸ್ಥೆಯಿಂದ ಗ್ರಾಹಕರಿಗೆ ಒದಗಿಸಲಾಗುವ ನೆಟ್ ಬ್ಯಾಂಕಿಂಗ್ ವ್ಯವಸ್ಥೆ, ಲಾಕರ್ ವ್ಯವಸ್ಥೆ, ಎಟಿಎಮ್ ಸೌಲಭ್ಯ, ಶಾಖೆಗಳ ಮಾಹಿತಿ, ಈ ಸಂಸ್ಥೆಯ ಸಾಧನೆಯ ವಿವರಗಳನ್ನು ತಿಳಿಸುವ ಪ್ರಸಂಟೇಶನ್ ಹಾಗೂ ವಾರ್ಷಿಕ ವರದಿಗಳು ಈ

ತಾಣದಲ್ಲಿ ದೊರೆಯುತ್ತದೆ.

ಹೆಚ್ಚಿನ ಪ್ರಚಾರ ಬಯಸದ ವೆಬ್‌ತಾಣದಂತೆ ತೋರುವ ಇದರಲ್ಲಿ ಈ ಸಂಸ್ಥೆಯ ಅನೇಕ ಸಾಮಾಜಿಕ ಕಾರ್ಯಗಳ ಬಗ್ಗೆ ಮಾಹಿತಿ ಕಡಿಮೆ. ಪರಿಸರ ಕಾಳಜಿಗಾಗಿ ಹಮ್ಮಿಕೊಂಡಿರುವ ವೃಕ್ಷಾರೋಪಣ, ವೃಕ್ಷ ಸಂವರ್ಧನ, ವೃಕ್ಷ ಸಂರಕ್ಷಣ ಕಾರ್ಯಕ್ರಮಗಳು, ದೇಶದಲ್ಲೇ ಮೊದಲ ಬಾರಿಗೆ ಸಹಕಾರಿ ಸಂಸ್ಥೆಯೊಂದರಿಂದ ನಿರ್ಮಿಸಲಾಗಿರುವ 72 ಕಿ.ಮೀ. ರಸ್ತೆ, ಹಸಿರು ಬ್ಯಾಂಕ್ ಎನ್ನುವ ಧಾನ್ಯ ಹಂಚಿಕೆ ಕಾರ್ಯ, 5000ಕ್ಕೂ ಹೆಚ್ಚು ಜನರಿಗೆ ಉದ್ಯೋಗ ಅವಕಾಶ ನೀಡಿರುವುದು, ಅನಾಥ ಶವಗಳಿಗೆ ಶವವಾಹನ ಹಾಗೂ ಸಂಸ್ಕಾರದ ವ್ಯವಸ್ಥೆ, ಕಾರಾಗೃಹಗಳಲ್ಲಿನ ಕೈದಿಗಳ ಜ್ಞಾನವೃದ್ಧಿಗಾಗಿ ಜ್ಞಾನವರ್ಧನ ಕಾರ್ಯಕ್ರಮಗಳು, ಸೈನಿಕರ ಮಕ್ಕಳ ಹಾಗೂ ಕುಟುಂಬಗಳ ಪೋಷಣೆ, ಅಂಗವಿಕಲರ ಕಲ್ಯಾಣಕ್ಕಾಗಿ ವಿಶೇಷ ಯೋಜನೆಗಳು, ಶಸ್ತ್ರಕ್ರಿಯೆ ಸೌಲಭ್ಯ, ಉಪಕರಣಗಳ ಹಂಚಿಕೆ, ನೌಕರ ಮೇಳ, ಸದಸ್ಯರ ಸಮಾವೇಶ ಮುಂತಾದ ಕಾರ್ಯಕ್ರಮಗಳನ್ನು ಈ ಸಂಸ್ಥೆಯು ನಡೆಸುತ್ತ ಬಂದಿದೆ.

The Sky is the Limit for growth. ದೇಶದ ವಾಣಿಜ್ಯ ಹಾಗೂ ಹಣಕಾಸು ಕ್ಷೇತ್ರದಲ್ಲಿ ಸಹಕಾರ ರಂಗ ಚಿಕ್ಕ ಹಣತೆಯಾದರೂ, ಇಂತಹ ಅನೇಕ ಹಣತೆಗಳ ಸಹಾಯದಿಂದ ದೇಶವನ್ನು ಸ್ವಾವಲಂಬನೆಯತ್ತ ಕೊಂಡೊಯ್ಯುವ ಸೂರ್ಯಪ್ರಕಾಶ ಪ್ರಜ್ವಲಿಸಬೇಕಿದೆ. ಈ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳು ಆರ್ಥಿಕ ಚಟುವಟಿಕೆಗಳ ಜೊತೆಜೊತೆಗೆ ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಲು ಸಜ್ಜಾಗಬೇಕಿದೆ. ಸಾಮಾಜಿಕ ಬ್ಯಾಂಕಿಂಗ್ ಎನ್ನುವ ಹೊಸ ಸೇವಾ ಪರಿಕಲ್ಪನೆಯನ್ನು ಜಾರಿಗೆ ತರುವ ಹಾಗೂ ಅದನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಸಹಕಾರ ಕ್ಷೇತ್ರ ಗಮನಹರಿಸಬೇಕಿದೆ. ಈ ಕಾರ್ಯಗಳಿಗೆ ಬುಲ್ಡಾನಾ ಅರ್ಬನ್ ಕೋ ಆಪರೇಟಿವ್ ಕ್ರೆಡಿಟ್ ಸೊಸೈಟಿ ಲಿ., ಇದರ ಕಾರ್ಯಗಳು ಮಾದರಿ ಹಾಗೂ ಸ್ಫೂರ್ತಿಯಾಗಲಿ.

## ಅಭಿನಂದನೆ ಸಲ್ಲಿಕೆ



ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್‌ರವರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾಗಿ ಪುನರ್‌ನೇಮಕವಾಗಿರುವ ಶ್ರೀ ಕೆ.ವೆಂಕಟೇಶ್‌ರವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಸಹಕಾರಿ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಜಿ.ಟಿ.ದೇವೇಗೌಡ, ಕ್ರೆಡಿಟ್ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್ ಮುಂತಾದವರು ಉಪಸ್ಥಿತರಿದ್ದರು.



ಶ್ರೀ ಕನ್ನಿಕಾಪರಮೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ನಿ., ಸಿಂಧನೂರು ಸಹಕಾರಿಯಿಂದ ಸಿಂಧನೂರು ಸಾರ್ವಜನಿಕರ ಆಸ್ಪತ್ರೆಯಲ್ಲಿ ಹಾಲು ಮತ್ತು ಬ್ರೆಡ್ ವಿತರಿಸುವ ಕಾರ್ಯಕ್ರಮ.

# 59ನೇ ಕನ್ನಡ ರಾಜ್ಯೋತ್ಸವ ರಾಜ್ಯ ಪ್ರಶಸ್ತಿ ಪುರಸ್ಕೃತ ಸಹಕಾರಿಗಳು



ಡಾ. ಗುರುರಾಜ ಹೆಬ್ಬಾರ್

ಹಾಸನದ ಸಂಜೀವಿನಿ ಸಹಕಾರಿ ಆಸ್ಪತ್ರೆಯ ಡಾ. ಗುರುರಾಜ ಹೆಬ್ಬಾರ್ ಹಾಗೂ ಉತ್ತರ ಕನ್ನಡದ ಪತ್ರಕರ್ತರು, ಸಹಕಾರಿ ಲೇಖಕರೂ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶಿವಾನಂದ ಕಳವೆ ಅವರುಗಳಿಗೆ ಈ ಭಾರಿಯ ಕನ್ನಡ ರಾಜ್ಯೋತ್ಸವ ರಾಜ್ಯ ಪ್ರಶಸ್ತಿ ಪುರಸ್ಕಾರ ಸಂದಿರುವುದಕ್ಕೆ ಸಂಯುಕ್ತ ಸಹಕಾರಿ ಅಭಿನಂದಿಸುತ್ತದೆ.



ಶ್ರೀ ಶಿವಾನಂದ ಕಳವೆ

### ಸೈಂಟ್ ಮಿಲಾಗ್ರೀಸ್ ಕ್ರೆಡಿಟ್ ಸೌಹಾರ್ದ ಕೊ-ಆಪರೇಟಿವ್ ಲಿ., ಶಿವಮೊಗ್ಗ ಶಾಖೆಯ ಉದ್ಘಾಟನೆ

## "ಸೌಹಾರ್ದ ಸಹಕಾರಿಗಳಿಂದ ಗ್ರಾಹಕರಿಗೆ ಎಲ್ಲಾ ಬಗೆಯ ಸೇವೆ ನೀಡಲು ಸಾಧ್ಯ ಶಾಸಕ ಶ್ರೀ ಕೆ.ಬಿ.ಪ್ರಸನ್ನಕುಮಾರ

ಕಳೆದ 12 ವರ್ಷಗಳಿಂದ ಉತ್ತಮ ಸೇವೆ ನೀಡುತ್ತಿರುವ ಈ ಸಹಕಾರಿಯ 23ನೇ ಶಾಖೆಯು ಶಿವಮೊಗ್ಗದಲ್ಲಿ ದಿನಾಂಕ 12-10-2014ರಂದು ಡಾ. ಫ್ರಾನ್ಸಿಸ್ ಸೆರಾವೋ, ಧರ್ಮಾಧ್ಯಕ್ಷರು ಶಿವಮೊಗ್ಗ ಧರ್ಮಪ್ರಾಂತ ಇವರಿಂದ ಉದ್ಘಾಟನೆಗೊಂಡಿತು.

ಮುಖ್ಯ ಅಥಿತಿಗಳಾಗಿ ಆಗಮಿಸಿದ ಶಿವಮೊಗ್ಗ ನಗರದ ಶಾಸಕರಾದ ಸನ್ಮಾನ್ಯ ಶ್ರೀ ಕೆ.ಬಿ. ಪ್ರಸನ್ನಕುಮಾರ್‌ರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಕಾರ್ಯ ತೃಪ್ತಿಕರವಾಗಿದೆ. "ಸೌಹಾರ್ದ ಸಹಕಾರಿಗಳಿಂದ ಗ್ರಾಹಕರಿಗೆ ಎಲ್ಲಾ ಬಗೆಯ ಸೇವೆ ನೀಡಲು ಸಾಧ್ಯ ಎಂದು ಹೇಳಿರು.

ಸಹಕಾರಿಯ ಅಧ್ಯಕ್ಷರಾದ ಶ್ರೀಮತಿ ರೋಸ್ಲಿನ್ ಫರ್ನಾಂಡಿಸ್ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ www.milagrescooperative.com ಹೆಸರಿನ ಸಹಕಾರಿಯ ನೂತನ ವೆಬ್‌ಸೈಟನ್ನು ಬಿಡುಗಡೆಗೊಳಿಸಿದರಲ್ಲದೇ, ನೂತನ



ಪ್ರಿಂಟಿಂಗ್ ಪಾಸ್‌ಬುಕ್ ಹಾಗೂ ICICI ಬ್ಯಾಂಕ್ ಸಹಯೋಗದ "ಪೇ ಡೈರೆಕ್ಟ್ ಕಾರ್ಡ್" (ATM Card) ಸೇವೆಗೆ ಚಾಲನೆ ನೀಡಲಾಯಿತು.

## ಶ್ರೀ ಅಣ್ಣಾಸಾಹೇಬ್ ಜೊಲ್ಲೆ, ಅಧ್ಯಕ್ಷರು, ಕೆ.ಓ.ಎಫ್. ಹಾಗೂ ಶ್ರೀಮತಿ ಶಶಿಕಲಾ ಜೊಲ್ಲೆ, ಶಾಸಕರು, ನಿಪ್ಪಾಣಿ ಇವರುಗಳ ಸಂಯುಕ್ತ ಸಹಕಾರಿಯ ಭೇಟಿ



ಕೆ.ಓ.ಎಫ್.ನ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಶ್ರೀ ಅಣ್ಣಾಸಾಹೇಬ್ ಜೊಲ್ಲೆಯವರು ಪ್ರಪ್ರಥಮ ಬಾರಿಗೆ ಸಂಯುಕ್ತ ಸಹಕಾರಿಗೆ ಭೇಟಿ ನೀಡಿದಾಗ ಶ್ರೀಯುತರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಗುರುನಾಥ ಜಾಂತಿಕರ ಹಾಗೂ ಉಪಾಧ್ಯಕ್ಷರಾದ ಶ್ರೀ ಹೆಚ್.ವಿ.ರಾಜೀವ, ಮಾಜಿ ಅಧ್ಯಕ್ಷರಾದ ಶ್ರೀ ಎಸ್.ಆರ್.ಸತೀಶ್‌ಚಂದ್ರರವರು ಮತ್ತಿತರರು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಶಾಸಕರಾದ ಶ್ರೀಮತಿ ಶಶಿಕಲಾ ಜೊಲ್ಲೆಯವರು ಉಪಸ್ಥಿತರಿದ್ದು, ಶ್ರೀ ಬೀರೇಶ್ವರ ಸೌಹಾರ್ದ ಸಹಕಾರಿಯ ಲಾಭಾಂಶದಲ್ಲಿ ಸಹಕಾರ ಶಿಕ್ಷಣ ನಿಧಿಯ ಚೆಕ್‌ನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷರಿಗೆ ನೀಡಿದರು.

# ಅಧ್ಯಯನ ಪ್ರವಾಸದ ಅನಿಸಿಕೆಗಳು ಭಾಗ – 2 : ಪ್ರಯಾಸವಾಗದ ಪ್ರವಾಸ

▸▸ **ಹಾಲಯ್ಯ ಶೇ. ಹಿರೇಮಠ,** ಅಧ್ಯಕ್ಷರು, ಆಸರೆ ವಿವಿಧೊದ್ದೇಶ ಸೌಹಾರ್ದ ಸಹಕಾರಿ ನಿ., ಸಿಂಧನೂರು, ರಾಯಚೂರ ಜಿಲ್ಲೆ.

ಸುಮಾರು 4000 ಕಿ.ಮೀ. ಸುತ್ತನ್ನು ಸಹಕಾರಿ ಕ್ಷೇತ್ರದ ಅಧ್ಯಯನಕ್ಕಾಗಿ ಬಳಸಿಕೊಂಡದ್ದು ಸ್ತುತ್ಯಾರ್ಹ. ಹವಾನಿಯಂತ್ರಿತ ಬಸ್ಸು ಗಾಳಿಯಲ್ಲಿ ತೇಲಿದಂತೆ ಹೋಗಿ ಬೆಳಗಿನ 3.30 ನಿ. ಯಕ್ಸಾಂಬಕ್ಕೆ ಇಳಿದಾಗ ಪ್ರಾರಂಭವಾಯಿತು ಪ್ರವಾಸದ ಮೊದಲ ಹೆಜ್ಜೆ, ನಿಸ್ವಾರ್ಥ ಸೇವೆ ಮಾಡುವ ಮನಸ್ಸಿದ್ದರೆ ಏನನ್ನಾದರೂ ಮಾಡಬಹುದು ಎನ್ನುವದಕ್ಕೆ ಜ್ವಲಂತ ಸಾಕ್ಷಿ ಶ್ರೀ ಬೀರೇಶ್ವರ ಪತ್ತಿನ ಸೌಹಾರ್ದ ಸಹಕಾರಿಯನ್ನು ನೋಡಿದಾಗ ಮನದಟ್ಟಾಯಿತು. ಅವರು ತೊಡಗಿಸಿಕೊಂಡ ರೀತಿ, ಉಪಯೋಗಿಕೊಂಡ ಸೌಲಭ್ಯ ಮೆಚ್ಚುವಂತಹದು. ಹಾಗೆ ಮುಂದೆ ಸಾಗಿದಾಗ ಶ್ರೀ ಅರಿಹಂತ ಪತ್ತಿನ ಸೌಹಾರ್ದ ಸಹಕಾರಿ ಕೇವಲ ಹಣ ಗಳಿಕೆ ಮಾತ್ರ ಸಹಕಾರಿಯ ಉದ್ಯೋಗವಲ್ಲ ಸಾರ್ವಜನಿಕ ಕ್ಷೇತ್ರದಲ್ಲಿ ನಮ್ಮನ್ನು ತೊಡಗಿಸಿಕೊಂಡಾಗ ದೊರಕುವ ಸಾಮಾಜಿಕ ಮನ್ನಣೆಗೆ ಪಾತ್ರರಾದ ಶ್ರೀ ರಾವ್ ಸಾಹೇಬರನ್ನು ನೋಡಿದಾಗ ಖುಷಿಯಾಯಿತು.

ಅಲ್ಲಿಂದ ಪುಷ್ಕಳ ಭೋಜನ ಸ್ವೀಕರಿಸಿ, ಕೊಲ್ಲಾಪೂರದ ಕಡೆ ಸಾಗಿ ಶೇತಕರಿ ಬಝಾರ ಒಳಹೊಕ್ಕಾಗ ಸಣ್ಣದಾಗಿ ಹಳ್ಳಿಯ ಜನರ ಉಪಯೋಗಕ್ಕಾಗಿ ಸಹಕಾರಿ ಪೌಲ್ಟ್ರೀ ಫಾರಂ, ವಿಶಾಲವಾಗಿ ಬೆಳೆದ ಜನತಾ ಬಜಾರ ಇವೆಲ್ಲವುಗಳ ಸೌಲಭ್ಯ ಬಳಸಿಕೊಂಡ ಗ್ರಾಹಕರ ಮುಖದಲ್ಲಿ ಆ ಮಂದಸ್ಮಿತವನ್ನು ಕಂಡಾಗ ಆ ಸಂಸ್ಥೆಯ ಸಂಸ್ಥಾಪಕರ ಕಾರ್ಯ ಸಾರ್ಥಕವಾದದ್ದು ಕಾಣಬಹುದು. ಹಾಗೆ ಮುಂದೆ ವೈಕುಂಠ ಮೆಹತಾ ಆಡಳಿತ ನಿರ್ವಹಣಾ ತರಬೇತಿ ಕೇಂದ್ರ ಯಾವ ಮಟ್ಟದಲ್ಲಿ ಕಾರ್ಯನಿರ್ವಹಿಸಿದೆಯೆಂದರೆ ಪ್ರಾರಂಭದ ದಿನದಿಂದಲೂ ತರಬೇತಿ ಪಡೆದವರಿಗೆ ಪ್ರತಿಶತ 100% ಖಾಯಂ ಉದ್ಯೋಗ ಒದಗಿಸಿಕೊಟ್ಟದೆಯೆಂದರೆ ಇದಕ್ಕಿಂತ ಹೆಚ್ಚಿನದೇನು ಬೇಕು. ಆಧುನಿಕ ತಂತ್ರಜ್ಞಾನವನ್ನು ಹೇಗೆ ಬಳಸಿಕೊಳ್ಳಬಹುದೆನ್ನುವುದಕ್ಕೆ ಉತ್ತಮ ಉದಾಹರಣೆ ಕಾಸ್‌ಮಾಸ್ ಬ್ಯಾಂಕ್, ಪೂನಾ ಉತ್ತಮ ನಿದರ್ಶನ.

ಇವೆಲ್ಲವುಕ್ಕಿಂತ ಕ್ಷಿಪ್ರ ಗತಿಯಲ್ಲಿ ಅದ್ಭುತ ಬೆಳವಣಿಗೆಗೆ ಸಾಕ್ಷಿ ಬುಲ್ದಾನಾ ಬ್ಯಾಂಕ್, ಪೂನಾ ಕೇವಲ 28 ವರ್ಷದಲ್ಲಿ ಸುಮಾರು 350 ಬ್ರ್ಯಾಂಚ್‌ಗಳು, 7 ರಾಜ್ಯಗಳಲ್ಲಿ ಕಾರ್ಯ ವಿಸ್ತರಣೆ, ಸುಮಾರು 310 ಗೋಡೌನ್‌ಗಳು, 50 ಕಿ ಮೀ ಟೋಲ್‌ಗೇಟ ನಿರ್ಮಾಣ, ಹಲವು ಗೋಶಾಲೆ, ವೃದ್ಧಾಶ್ರಮ ಇವೆಲ್ಲವನ್ನು ಅವಲೋಕಿಸಿದಾಗ ಇದು ಸಾಧ್ಯಾನ? ಅನ್ನುವಷ್ಟರ ಮಟ್ಟಿಗೆ ಬೆಳವಣಿಗೆ ಕಂಡು ನಾವೂ ಹೀಗೇಕೆ ಪ್ರಯತ್ನಿಸಬಾರದು ಎನ್ನುವ ಆಸೆ ಮೊಳಕೆಯೊಡೆಯುವಲ್ಲಿ ಕಾರಣವಾಯಿತು. ಸಂತೋಷದಿಂದ ಮುಂದೆ ಸಾಗಿದಾದ ಸಂತೋಷ ಇಮ್ಮಡಿಯಾಯಿತು, ಕಾರಣ ಕನ್ನಡಿಗರಾದ ಬಿ ಕೆ ಎಸ್ ಅಯ್ಯಂಗಾರ್ ಯೋಗಶಾಲಾದೊಳಗೆ ಅಡಿ ಇಟ್ಟಾಗ ಇಡೀ ನಮ್ಮ ದೇಶದ ಸಂಸ್ಕೃತಿಯೇ ಅನಾವರಣಗೊಂಡಂತಾಯಿತು, ನಾವು ಹೋದ ವೇಳೆಯಲ್ಲಿ ಚಿಲಿ ದೇಶದ ನಾಗರೀಕರಿಗೆ ಯೋಗ ಅಭ್ಯಾಸ ತರಬೇತಿ ಕಂಡಾಗ ನಮ್ಮ ದೇಶದ ಸಂಸ್ಕೃತಿಯನ್ನು ಕಲಿಯಲು ಉತ್ಸುಕರಾಗಿರುವ ವಿದೇಶಿಯರನ್ನು ಕಂಡು ನಮ್ಮ ಬೆನ್ನನ್ನು ನಾವೇ ಚಪ್ಪರಿಸಿಕೊಂಡೆವು.

ಈಗ ತಾನೆ ನಮ್ಮನ್ನು ಅಗಲಿದ ಶ್ರೀಯುತ ಬಿ ಕೆ ಎಸ್ ಅಯ್ಯಂಗಾರರ ಆತ್ಮ ನಮ್ಮೆಲ್ಲರಿಗೆ ಆಶೀರ್ವದಿಸಲಿ ಎನ್ನುವ ಮನೋಕಾಮನೆಯೊಂದಿಗೆ ಬಂದೆವು. ಮುಂದೆ ಗುಜರಾತ್ ಪ್ರವೇಶಿಸಿದಾಗ ಆ ಮಣ್ಣಿನ ವಾಸನೆಯಲ್ಲಿಯೇ ಸಹಕಾರ ಸಹಕಾರ ಎನ್ನುವ ಮಂತ್ರ ಗುಂಯ್‌ಗುಟ್ಟಿದಂತಾಯಿತು. ಶ್ರೀ ಮನಸ್ಸು ಮಾಡಿದರೆ ಏನನ್ನಾದರೂ ಮಾಡಬಲ್ಲೆವು ಎನ್ನುವದಕ್ಕೆ ಸೇವಾ ಮಹಿಳಾ ಸಂಘಟನೆ ಕಾರ್ಯ ವೈಖರಿ ಕಂಡು ಸಂತಸವಾಯಿತು. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರನ್ನು ನಾವು ನೋಡಿಲ್ಲ, ಆದರೆ ಸಾಬರಮತಿ ಆಶ್ರಮ ಕಂಡಾಗ ಗಾಂಧೀಜಿಯವರು ನಮ್ಮ ಜೊತೆಯೇ ಇದ್ದಾರೆನ್ನುವ ಮನೋಕಲ್ಪನೆಯಲ್ಲಿ ನಾವಿದ್ದೆವು.

ಆ ಪ್ರಶಾಂತ ವಾತಾವರಣ ಗಾಂಧೀಯವರ ರಾಮ ರಾಮ ಮಂತ್ರ ನಮ್ಮ ಬಾಯಿಂದ ತಮ್ಮಷ್ಟಕ್ಕೆ ತಾವೇ ಹೊರಬಂದವು. ಧನ್ಯತಾಭಾವದೊಂದಿಗೆ ಸಾಬರಮತಿ ಆಶ್ರಮವನ್ನು ಒಲ್ಲದ ಮನಸ್ಸಿನಿಂದ ಬಿಟ್ಟು ಹೊರ ಬಂದು, ಅಹಮದಾಬಾದ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗೆ ಭೇಟಿ ನೀಡಿ, ಅವರು ಕೈಗೊಂಡ ಉತ್ತಮ ಕಾರ್ಯಗಳನ್ನು ಮೆಚ್ಚಿ ಹೊರಬಂದೆವು. ಸಾಯಂಕಾಲ ಅಕ್ಷರಧಾಮಕ್ಕೆ ಹೋದಾಗ ಹಾಗೂ ಲೇಸರ್ ಕಾರ್ಯವನ್ನು ವೀಕ್ಷಿಸಿದಾಗ ಅದನ್ನು ವರ್ಣಿಸಲು ಯಾವ ಪದಗಳು ಸಾಲದು, ಅಂತಹ ಅದ್ಭುತ ಚಿತ್ರ ವೀಕ್ಷಿಸಿದಾಗ 8 ದಿನದ ಆಯಾಸವೆಲ್ಲ ಮರೆತಂತಾಯಿತು. ಇದೆಲ್ಲವನ್ನು ಮೀರಿ ಗುಜರಾತ್ ಬೆಳೆದ ಪರಿ ಅಬ್ಬಾ ಹೇಳುವದಕ್ಕಿಂತ ನೋಡಬೇಕು, ಇಡೀ ಗುಜರಾತಿಗೆ ವಿಶೇಷವಾಗಿ ನಮ್ಮ ಹೃದಯಲ್ಲಿ ವಿವೇಕಾನಂದರ ನಂತರ ಸ್ಥಾನ ಪಡೆದ ಶ್ರೀ ನರೇಂದ್ರ ಮೋದಿಜಿಗೆ ಹ್ಯಾಟ್ಸ್ ಆಫ್ ಹೇಳಲೇಬೇಕು. ಮುಂದೆ ಬಾಂಬೆ, ಗೋವಾ ರಾಜ್ಯದಲ್ಲಿ ಸಹಕಾರಿ ಸಂಸ್ಥೆಗಳಿಗೆ ಭೇಟಿ ನೀಡಿದೆವು.

ಇದಕ್ಕಿಂತ ಪ್ರವಾಸದಲ್ಲಿಯೇ ಅತಿ ಹೆಚ್ಚು ಮನದಲ್ಲಿ ಉಳಿದದ್ದು 16 ಸಂಸ್ಥೆಗಳ 34 ಸದಸ್ಯರು ಎಂದೂ ನಾನು ಈ ಜಿಲ್ಲೆಯವ

ಅವರು ಆ ಜಿಲ್ಲೆಯವರು ಎನ್ನುವುದು ಎಲ್ಲೆಲ್ಲಿಯೂ ಸುಳಿಯಲೇ ಇಲ್ಲ, ಹಿರಿಯರ ಅನುಭವದ ರಸಜೇನು ಕಿರಿಯರ ಉಲ್ಲಾಸಭರಿತ ಮಾತುಗಳು ಒಂದು ಅವಿಭಕ್ತ ಕುಟುಂಬದ ಸದಸ್ಯರು ಖುಷಿಯಾಗಿ ಸಂಚರಿಸಿದಂತಿತ್ತು. ಹಿರಿಯರಾದ ಶ್ರೀ ಕಾರಕೂನ ಇವರ ಸಹನೆ, ನಡೆದುಕೊಂಡ ರೀತಿ ನಮಗೆ ಹೊಸ ಪಾಠವನ್ನು ಕಲಿಸಿತು. ಆದರೆ ಬೀಳ್ಕೊಡುವಾಗ ಮನಸ್ಸು ಭಾರವಾಗಿತ್ತು, ಮತ್ತೆ ಭೇಟಿಯಾಗೋಣ ಎನ್ನುವ ಸುಂದರ ನಗುವಿನೊಂದಿಗೆ ನಮ್ಮ ನಮ್ಮ ಊರುಗಳಿಗೆ ಮರಳಿದೆವು. ಇದನ್ನು ಆಯೋಜಿಸಿದ ಸಂಯುಕ್ತ ಸಹಕಾರಿ ಆಡಳಿತ ಮಂಡಳಿ, ಸಿಬ್ಬಂದಿ ವರ್ಗಕ್ಕೆ ಧನ್ಯವಾದಗಳನ್ನು ಹೇಳಲೇಬೇಕು. ಮುಂದೆಯು ಈ ಪ್ರಯಾಣ ಹೀಗೆ ಸಾಗಲಿ ಎನ್ನುವುದೇ ನಮ್ಮ ಆಸೆ.

ಜೈ ಕರ್ನಾಟಕ, ಜೈ ಸಹಕಾರ.

## Educative Tour

**Col.Jagjeevan Bhandari (Retd),** President, Sundar Ram Shetty Credit Souharda Sahakari Ltd, Bangalore.

The visit was really educative. Learnt how best one can use these co-operatives to the betterment of the people. It is also observed that the leaders of these cooperatives have dedicated themselves to finding solutions to the problems of people. During our journey, training officer Mr. Karkun and AGM Mr. Raghunandan raised a very sensitive issue by requesting the participants to explain how our societies have contributed to the welfare of their members and common people. This was really an educative and useful. There were 30 participants from 16 different souharda cooperatives. A unique sense of comradeship and family like bonding had developed among all the participants. The participants did not feel tired and boredom was nowhere near us.

efforts made by Directors Mr. Nagendra Gupta and shrimati Manjula Patil, training officer Mr. Karkun, AGM Mr. Raghunandan, was really praise worthy and deserve to be appreciated. Though this was the first tour of this kind we learnt a lot and the tour is a great success.

## ಅಂತರರಾಜ್ಯ ಪ್ರವಾಸದ ಸಂಯೋಜನೆ ಅತ್ಯುತ್ತಮವಾಗಿದ್ದು, ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಇದು ಒಂದು ಉತ್ತಮವಾದ ಪ್ರಕ್ರಿಯೆ

**ಶ್ರೀ ಸುಧೀಶ್ ನಾಯಕ್,** ಅಧ್ಯಕ್ಷರು, ಹಂಸ ಚೈತನ್ಯ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ.

ದಿನಾಂಕ : 13.09.2014 ರಿಂದ 22.09.2014ರವರೆಗೆ ಏರ್ಪಡಿಸಿದ ಅಂತರರಾಜ್ಯ ಪ್ರವಾಸದ ಸಂಯೋಜನೆ ಅತ್ಯುತ್ತಮ ವಾಗಿದ್ದು, ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಇದು ಒಂದು ಉತ್ತಮವಾದ ಪ್ರಕ್ರಿಯೆ ಆಗಿದೆ. ನಾವು ಭೇಟಿ ಮಾಡಿದ ಸೌಹಾರ್ದ ಸಹಕಾರಿಗಳು ಬೆಳೆದ ರೀತಿಯನ್ನು ನೋಡುವಾಗ ನಾವು ಕೂಡಾ ಅದರಂತೆ ಎತ್ತರಕ್ಕೆ ಬೆಳೆಯಲು ಹುರುಪು ತಂದು ಕೊಟ್ಟಿದೆ.

ನಾವು ಭೇಟಿಯಾದ ಶ್ರೀ ಬೀರೇಶ್ವರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಹಾಗೂ ಅದರ ಸಮೂಹ ಸಂಸ್ಥೆಗಳು, ಶ್ರೀ ಅರಿಹಂತ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ., ಬುಲ್ಡಾನ ಸಹಕಾರಿ ಸಂಘ, ಕಾಸ್ಮೋಸ್ ಬ್ಯಾಂಕ್, ಸೇವಾ ಸಹಕಾರಿ ಸಂಘ, ಕೃಷಿ ಅಭಿವೃದ್ಧಿ ಬ್ಯಾಂಕ್, ಅಹಮದಾಬಾದ್ ಹಾಗೂ ಇತರ ಸಹಕಾರಿ ಸಂಘಗಳು ಅತ್ಯುತ್ತಮ ಸೇವೆಯನ್ನು ಸದಸ್ಯರಿಗೆ ಕೊಡುತ್ತಿದ್ದು, ಇದರಲ್ಲಿರುವ ಕೆಲವು ಸೇವೆಗಳನ್ನು ನಮ್ಮ ಸಹಕಾರಿಯಲ್ಲಿ ಕೂಡ ಅಳವಡಿಸಲು ನಾವು ಕ್ರಮವನ್ನು ಕೈಗೊಳ್ಳುತ್ತಿದ್ದೇವೆ. ಮುಖ್ಯವಾಗಿ ಮೈಕ್ರೋ ಫೈನಾನ್ಸ್, At par cheque facility, safe locker, ಟಿಕೆಟ್ ಬುಕ್ಕಿಂಗ್, ವಿಮಾ ಸೌಲಭ್ಯ, ಪಾಸ್‌ಪೋರ್ಟ್ ಸೇವೆ ಇವೇ ಮೊದಲಾದ ಸೇವೆಗಳನ್ನು ನಮ್ಮಲ್ಲಿ ಅಳವಡಿಸಿಕೊಳ್ಳಲು ನಮಗೆ ಈ ಪ್ರವಾಸದಿಂದ ಅನುಕೂಲವಾಗಿದೆ.

ಈ ಅಧ್ಯಯನ ಪ್ರವಾಸವನ್ನು ಅತ್ಯುತ್ತಮವಾಗಿ ಸಂಯೋಜಿಸಿದ ಸೌಹಾರ್ದ ಸಂಯುಕ್ತ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗ ಎಲ್ಲರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.



# ಸಹಕಾರಿ ಸಂಸ್ಥೆಗಳಲ್ಲಿ ವೃತ್ತಿಪರತೆಯ ವ್ಯವಹಾರ; ಮಾನವ ಸಂಪನ್ಮೂಲ ಹಾಗೂ ಗ್ರಾಹಕರ ಸಂಬಂಧ ನಿರ್ವಹಣೆಯ ಪಾತ್ರ ಮತ್ತು ಮಹತ್ವ

– **ಡಾ|| ನಂದೀಶ ವಿ. ಹಿರೇಮಠ,** ಹಿರಿಯ ಬೋಧಕರು, ರಾಷ್ಟ್ರೀಯ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ತರಬೇತಿ ಸಂಸ್ಥೆ (ಎನ್.ಐ.ಆರ್.ಬಿ) ಬೆಂಗಳೂರು.

**ಸಂಸ್ಥೆಗಳಿಗೆ ಮಾನವ ಸಂಪನ್ಮೂಲವನ್ನು ಯಾವ ರೀತಿ ತಕ್ಕ ಸಮಯದಲ್ಲಿ, ತಕ್ಕ ಕೆಲಸಕ್ಕೆ, ತಕ್ಕ ವ್ಯಕ್ತಿಯನ್ನು ನಿಯುಕ್ತಿಗೊಳಿಸಿ ತಕ್ಕದಾಗ ಪರಿಣಾಮಗಳನ್ನು ಗಳಿಸಬೇಕು ಗೊತ್ತಿರಬೇಕು. ಅದನ್ನೇ ಆಂಗ್ಲಭಾಷೆಯಲ್ಲಿ "Organisations should recreit right people, for right job at right time to get best results" ಅಂತಾ ಹೇಳುತ್ತಾರೆ.**

...ಹಿಂದಿನ ಸಂಚಿಕೆಯಿಂದ

1. ನಾವೆಲ್ಲ ಈಗ ತೀವ್ರಗತಿಯಲ್ಲಿ ಬದಲಾಗುತ್ತಿರುವ ಸಮಾಜದಲ್ಲಿ ಬದುಕುತ್ತಿದ್ದವೆ. ಜಾಗತೀಕರಣದ ಭರಾಟೆಯಲ್ಲಿರುವ ವಾತಾವರಣ 'ಬದಲಾವಣೆ' (Change) ಯನ್ನು ಬಯಸುತ್ತಿದೆ. ಸಮಯಕ್ಕೆ ಮತ್ತು ಪರಿಸ್ಥಿತಿಗೆ ತಕ್ಕಂತೆ ನಾವು ಬದಲಾಗುವುದನ್ನು ಕಲಿತರೆ ಸಾಧನೆ ಸುಲಭ.

2. ಇತ್ತಿಚಿನವರೆಗೂ, ನಾವು ಬುದ್ಧಿವಂತರಾಗಿದ್ದರೆ ಕೆಲಸ ಸಿಗುತ್ತದೆ, ಪ್ರೊಮೋಷನ್ ಲಭ್ಯವಾಗುತ್ತದೆ, ಅದ್ಧಿಕಾರ ಲಭಿಸುತ್ತದೆ ಅನ್ನುವ ಭಾವನೆ ಇತ್ತು. ಈಗ ಆ ಬುದ್ಧಿವಂತಿಕೆ (Inteligent Quotient) ಜೊತೆಗೆ. ಭಾವನೆಗಳ ತಾದತ್ಮತೆಯೊಂದಿಗೆ (Emotional Quotient) ಬೇರೆಯವರ/ವಿವಿಧ ಪರಿಸ್ಥಿತಿಗೆ ಹೊಂದಿಕಳ್ಳುವ ಹಾಗೂ ಕೆಲಸದಲ್ಲಿ ಅತಿ ಆನಂದ ಅನುಭವಿಸಿ (Passion Quotient) ಸಂಪೂರ್ಣಗೊಳಿಸುವ ಮನೋಭಾವನೆ / ಕೌಶಲ್ಯಗಳು ಬಹು ಮಹತ್ವಕಾರಿಯಾಗಿವೆ.

ಒಟ್ಟಾರೆ ಅಭಿಪ್ರಾಯದಲ್ಲಿ, ಸಂಸ್ಥೆಗಳಿಗೆ ಮಾನವ ಸಂಪನ್ಮೂಲವನ್ನು ಯಾವ ರೀತಿ ತಕ್ಕ ಸಮಯದಲ್ಲಿ, ತಕ್ಕ ಕೆಲಸಕ್ಕೆ, ತಕ್ಕ ವ್ಯಕ್ತಿಯನ್ನು ನಿಯುಕ್ತಿಗೊಳಿಸಿ ತಕ್ಕದಾಗ ಪರಿಣಾಮಗಳನ್ನು ಗಳಿಸಬೇಕು ಗೊತ್ತಿರಬೇಕು. ಅದನ್ನೇ ಆಂಗ್ಲಭಾಷೆಯಲ್ಲಿ "Organisations should recreit right people, for right job at right time to get best results" ಅಂತಾ ಹೇಳುತ್ತಾರೆ.

ಅದೇ ರೀತಿ, ಪ್ರತಿ ವ್ಯಕ್ತಿಯೂ (ಆಡಳಿತ ಮಂಡಳಿಗೆ ಸೇರಿರಬಹುದು ಅಥವಾ ಸಿಬ್ಬಂದಿ ವರ್ಗದವರಿರಬಹುದು) ತಾನು ತನ್ನ ಜವಾಬ್ದಾರಿ ಮತ್ತು ಇತಿ–ಮಿತಿಗಳನ್ನು ಅರಿತು ಕಾರ್ಯನಿರ್ವಹಿಸಿದರೆ ಸಂಸ್ಥೆಗಳು ಅವುಗಳ ಧ್ಯೇಯೋದ್ದೇಶಗಳು ಸಾಧ್ಧಿಸುವಲ್ಲಿ ಸಹಕಾರಿಯಾಗುತ್ತದೆ. ಅದಲ್ಲದೆ, "ಗ್ರಾಹಕರು ಇಲ್ಲವಾದರೆ ನಮ್ಮ ಹಾಗೂ ಸಂಸ್ಥೆಗಳ ಭವಿಷ್ಯವಿಲ್ಲ" ಎಂಬ ಮಂತ್ರವನ್ನು ಎಂದೆಂದಿಗೂ ಮರೆಯಬಾರದು.

ಇದನ್ನೂ ಕಾರ್ಯಗತ ಮಾಡುವಲ್ಲಿ ಆಡಳಿತ ಮಂಡಳಿ (Board of Management)ಯ ಪಾತ್ರ 'HRM Policy' ಮಾಡುವಲ್ಲಿ ಅವಲಂಬಿತವಾಗಿರುತ್ತದೆ. ಯಾವ ಸಂಸ್ಥೆಯಲ್ಲಿ "ಸ್ಪಷ್ಟ–ನಿರ್ಧಷ್ಟಕರವಾದ–ನಿಷ್ಪಕ್ಷಪಾತಕರ – ಮೌಲ್ಯಾಧಾರಿತ– ವಾಸ್ತಾವತೆಯಿಂದ ಒಡಗೂಡಿದ ಊಖಜ ಕಠಟುಳಿಥಿ" ಇರುತ್ತದೆಯೋ ಅಲ್ಲಿ ಅಭಿವೃದ್ಧಿ ಸದಾಕಾಲ ನೆಲೆಸಿರುತ್ತದೆ.

ಈ ತತ್ವಗಳನ್ನು ಅನುಷ್ಠಾನಗೊಳಿಸಲು HRMD ( Human resources Management & Development) Department ಇರಬೇಕಾಗುತ್ತದೆ. ಅದು ಸಂಸ್ಥೆಗೆ ಬೇಕಾದ ಮಾನವ



ಸಂಪನ್ಮೂಲಗಳ ಕ್ರೋಢೀಕರಿಸುವುದು (Recruitement), ವರ್ಗಾವಣೆ (Transfer), ಪ್ರಮೋಷನ್ (Promotion), ತರಬೇತಿ ಹಾಗೂ ಅಭಿವೃದ್ಧಿ (Training & Development), ಕಾರ್ಯಕಾರಿ ವಿಶ್ಲೇಷಣೆ (Performance Appraisla), ವೃತ್ತಿಪಥ (Career Path) ಮುಂತಾದ ವಿಷಯಗಳ ಯೋಜನೆ– ಅನುಷ್ಠಾನದ ಜವಾಬ್ದಾರಿಯಿರುತ್ತದೆ.

ಸ್ವಾಭಿಮಾನಿ ಸಹಕಾರಿ

Swabhimani Sahakari, Monthly, Posted at GPO-MBC Bengaluru Post Office 560001,
Posting Day 8th. Registered No. RNP/BGW/1744/2014-16.
RNI No. KARBIL - 2004/18001. Pages 20

**1. ಗ್ರಾಹಕ ಸಂಬಂಧ ನಿರ್ವಹಣೆ (Customer Relationship Management, CRM) :** ಮಹಾತ್ಮ ಗಾಂಧೀಜಿಯವರು ಗ್ರಾಹಕ ಸೇವೆಯ ಬಗ್ಗೆ ತಮ್ಮ ಅನುಭವವನ್ನು ಹಂಚಿಕೊಳ್ಳುತ್ತ ಹೀಗೆ ಹೇಳಿದ್ದಾರೆ. "ಗ್ರಾಹಕ ನಮ್ಮ ವ್ಯವಹಾರದಲ್ಲಿ ತೊಂದರೆಯಲ್ಲ, ಆದರೆ ನಮ್ಮ ವ್ಯವಹಾರ ನಿಲ್ಲಲ್ಲು ಮೂಲಸ್ಥಂಬ. ಗ್ರಾಹಕನಿಗೆ ನಾವು ಸೇವೆ ನೀಡುತ್ತಿಲ್ಲ, ಬದಲಾಗಿ ಸೇವೆ ಮಾಡುವ ಅವಕಾಶವನ್ನು ಅವನು/ಅವಳು ನಮ್ಮ ಸಂಸ್ಥೆಗೆ ನೀಡುತ್ತಿದ್ದಾನೆ/ಳೆ. ಗ್ರಾಹಕ ನಮ್ಮ ದೇವರು, ಗ್ರಾಹಕನಿಲ್ಲದಿದ್ದರೆ ನಾವು ಇಲ್ಲ, ನಮ್ಮ ಲಾಭ ಇಲ್ಲ ಹಾಗೂ ನಮ್ಮ ಸಂಸ್ಥೆ/ ಈ ವ್ಯವಸ್ಥೆ ಇರುವುದಿಲ್ಲ".

ಈ ಅನುಭವದ ಮಾತು ನಮಗೆ ಅಖಿಒ ಬಗ್ಗೆ ಅದರಲ್ಲಿ ಗಾಢವಾಗಿ ಅಡಗಿರುವ ಅರ್ಥವನ್ನು ತಿಳಿಸುತ್ತದೆ. ಈಗಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ, ನಾವು ಇದನ್ನರಿತು ಅತೀವ ಕಾಳಜಿಯಿಂದ ಗ್ರಾಹಕರ ಜೊತೆ ಅನ್ಯೋನ್ಯ, ಸಂಬಂಧ ಬೆಳೆಸುವತ್ತ–ಉಳಿಸಿಕೊಳ್ಳಲು–ಅಭಿವೃದ್ಧಿಪಡಿಸಲು ಪ್ರಯತ್ನಿಸಬೇಕು.

**ಈ ನಿಟ್ಟಿನಲ್ಲಿ ಕೆಲವು ಸಲಹೆ (ಖಿiಠಿ) ಗಳನ್ನು ನೀಡಲಾಗಿದೆ :**

- ಗ್ರಾಹಕರು ಸಂಸ್ಥೆಗಳಿಗೆ ಬಂದ ತಕ್ಷಣ ಅವರನ್ನು ನಮಸ್ಕರಿಸಿ ಅಥವಾ ನಗುವಿನಿಂದ ಸ್ವಾಗತಿಸಬೇಕು.
- ಗ್ರಾಹಕರ ಸ್ವಾಭಿಮಾನಕ್ಕೆ ಧಕ್ಕೆಯಾಗುವ ಯಾವುದೇ ವಿಷಯದ ಬಗ್ಗೆ ಮಾತನಾಡಬಾರದು.
- ಗ್ರಾಹಕರ ಜೊತೆ ಮಾತನಾಡುವಾಗ/ಸಂಭಾಷಣೆಯಲ್ಲಿ ತೊಡಗಿದಾಗ ನೇರ ದೃಷ್ಟಿ ಅವರ ಕಡೆಯಿರಲಿ (Exe-to-eye contact), ಎಲ್ಲಿಯೋ ನೋಡುತ್ತಾ / ಏನನ್ನೋ ಮಾಡುತ್ತಾ ವ್ಯವಹಾರ ಮಾಡುವುದು ಸೌಜನ್ಯತೆ ಅಲ್ಲ.
- ಯಾವಾಗಲೂ ಮಾತನಾಡುವುದಕ್ಕಿಂತ ಶಾಂತತೆಯಿಂದ ಲಕ್ಷ್ಯಕೊಟ್ಟು ಕೇಳಿದಲ್ಲಿ, 60–70% ಗ್ರಾಹಕರನ್ನು ಅತಿ ಸರಳವಾಗಿ ಸಂತೃಪ್ತಿಗೊಳಿಸಬಹುದು ಎಂಬುದು ಅನುಭವಿಗಳ ಅಭಿಪ್ರಾಯ.
- ಆಶ್ಚರ್ಯಕರ ಘಟನೆಗಳು ಗ್ರಾಹಕನಿಂದ ಬರಲು ನಿರೀಕ್ಷಣೆ ಮಾಡದೆ, ಆಶ್ಚರ್ಯಕರ ಸೇವೆಯಿಂದ ಅವರನ್ನು ಸಂತಸಗೊಳಿಸಬೇಕು.
- ಕೊಟ್ಟ ಮಾತುಗಳನ್ನು ಉಳಿಸಿಕೊಂಡರೆ ಗ್ರಾಹಕ ಬೇರೆ ಕಡೆ ಹೋಗುವ ಸಂಭವ ಉದ್ಭವಿಸುವುದಿಲ್ಲ.
- ಗ್ರಾಹಕ ಗಂಭೀರವಾಗಿ ತೊಂದರೆ ಹೇಳಿದರೆ ಲಘುವಾಗಿ ಪರಿಗಣಿಸದೆ, ಅಷ್ಟೇ ಚಾಕಚಕ್ಯತೆಯಿಂದ ತೊಂದರೆಯನ್ನು ನಿವಾರಣೆಗೊಳಿಸಿರಿ.
- ವಿಚಾರಗಳು ಶಬ್ಧಗಳಾಗುತ್ತವೆ, ಶಬ್ಧಗಳು ಕಾರ್ಯಗಳಾಗುತ್ತವೆ, ಕಾರ್ಯಗಳು ಚಟಗಳಾಗುತ್ತವೆ, ಚಟಗಳು ಚಾರಿತ್ರ್ಯವಾಗುತ್ತವೆ ಅನ್ನುವ ನಾಣ್ಣುಡಿಯನ್ನು ಮರೆಯಬೇಡಿ. ಅದು ಅಖಿಒ ಗೂ ಅನ್ವಯಿಸುತ್ತದೆ.
- ಗ್ರಾಹಕರ ತೊಂದರೆಗೆ ಉತ್ತರ ಹುಡುಕುವ ಸುಲಭ ಉಪಾಯವೆಂದರೆ ನೀವೆ ಅವರ ಜಾಗದಲ್ಲಿದ್ದರೆ ಏನು ಬಯಸುತ್ತೀರಿ ? ಎಂದು ವಿಚಾರಿಸಿ ಆಗ ನಿಮಗೆ ತಕ್ಕ ಉತ್ತರ ಸುಲಭದಲ್ಲಿ ಸಿಗುತ್ತದೆ.
- ಯಾವಾಗಲೂ ನಗುಮುಖದಿಂದ ಮತ್ತು ಶಾಂತತೆಯಿಂದ ಗ್ರಾಹಕರ ಜೊತೆ ವ್ಯವಹಾರ ಮಾಡಿರಿ, ಖಂಡಿತಾ ಗಂಟು ಮುಖಬೇಡ !
- ಒಳ್ಳೆಯ ಭಾಷೆ ಉಪಯೋಗಿಸಿ, ಸೌಜನ್ಯತೆಯಿಂದ ವ್ಯವಹರಿಸಿ.
- ಶುಭ್ರ ಬಟ್ಟೆ ಧರಿಸಿ ಹಾಗೂ ವ್ಯವಹಾರಿಕ ಪ್ರಜ್ಞೆ (Commonsense) ನಿಮ್ಮ ಜೊತೆ ಸದಾ ಇರಲಿ.

**ಯಾವಾಗಲೂ ಯಶಸ್ಸಿನ ಗುಟ್ಟಿನ ನೆನಪಿಟ್ಟುಕೊಳ್ಳಿ :** "ನೀವು ನಿಮ್ಮ ಒಳ್ಳೆ ಕೆಲಸ ಮಾಡಿದರೆ, ಇಂದಿಲ್ಲಾ ನಾಳೆ, ನಿಮಗೆ ಒಳ್ಳೆ ಪ್ರತಿ ಫಲ / ಪ್ರತಿಕ್ರಿಯೆ/ ಪುರಸ್ಕಾರ ದೊರಕುತ್ತದೆ".

ಎಲ್ಲದಕ್ಕೂ ಮುಖ್ಯವಾಗಿ CRM Mantra (ಗ್ರಾಹಕ ಸಂಬಂಧ ನಿರ್ವಹಣೆಯ ಮಹಾಮಂತ್ರ) ವನ್ನು ಮರೆಯಬೇಡಿ :

"ಸಂತೃಪ್ತ ಗ್ರಾಹಕ ನಿಮ್ಮ ಸಂಸ್ಥೆಯ ಬಗ್ಗೆ ಫ್ರೀಯಾಗಿ ಪ್ರಚಾರ ಮಾಡುವ ಪ್ರಚಾರಕ. ಅಸಂತೃಪ್ತಗ್ರಾಹಕ ನಿಮ್ಮ ಸಂಸ್ಥೆಗೆ ಆಟಮ್ ಬಾಂಬ್". ಇಷ್ಟೆಲ್ಲಾ ತಿಳಿದುಕೊಂಡ ಮೇಲೂ, ನಾವು ನಮ್ಮ CRM Poliocies ಗಳನ್ನು ಬದಲಾವಣೆ ಮಾಡೋಣವೇ? ಈ ಆಯ್ಕೆ ನಿಮ್ಮದು. ಈ ಲೇಖನದಲದಲ್ಲಿ ವ್ಯಕ್ತಪಡಿಸಿದ ಕೇವಲ 10–25% ವಿಚಾರಗಳನ್ನು ಅರಿತು ಅನುಷ್ಠಾನಗೊಳಿಸಿದಲ್ಲಿ ಬಹುಶಃ ನಮ್ಮ ಸಹಕಾರಿ ಸಂಸ್ಥೆಗಳು, ಬೇರೆಲ್ಲ ಪ್ರತಿಸ್ಪರ್ಧಿಗಳನ್ನು ಹಿಮ್ಮೆಟ್ಟಿ, ಮುನುಗ್ಗಿ ಸಾಧ್ಧಿಸಬಹುದು. ಇಲ್ಲವಾದಲ್ಲಿ?

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ವಿಭಾಗೀಯ ಕಛೇರಿ #436, ಮೊದಲನೆಯ ಮಹಡಿ, ಹುಯಿಲಗೋಳ ಕಟ್ಟಡ ಶನಿ ಮಂದಿರ ಹತ್ತಿರ, ಪಾಟೀಲ ಗಲ್ಲಿ, ಬೆಳಗಾವಿ–590001 ದೂ.ಸಂ : 0831–2401551.

ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ : ಗುಲ್ಬರ್ಗಾ ನಂ 1–4/3 ಎ ಸಂಜೀವರಾವ್ ದೇಸಾಯಿ ಬಡಾವಣೆ, ಕೆ.ಎಸ್.ಆರ್.ಟಿ.ಸಿ. ಗೆಸ್ಟ್‌ಹೌಸ್ ಹಿಂಭಾಗ ಗಾರ್ಡನ್ ರಸ್ತೆ, ಗುಲ್ಬರ್ಗಾ – 585102. ದೂ. 08472–270222.

Edited, Printed and Published by Sharangouda G. Patil –Managing Director, on behalf of Karnataka State Souharada Federal Co operative Ltd., Nirman Bhavan complex, Dr. Rajkumar Road, 1st Block, Rajajinagar, Bangalore-560 010